# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಗುರುವಾರ, ಆಗಸ್ಟ್ 05, 2021

ಸಂಪುಟ : 48  ಸಂಚಿಕೆ : 83  ☎ 254736  91642 99999  RNI No: 27369/75  KA/SK/CTA-275/2021-2023. O/P @ J.D. Circle P.O.  ಪುಟ : 4  ರೂ : 4.00  www.janathavani.com  janathavani@mac.com


## ಎಸ್.ಟಿ. ಕಲ್ಯಾಣ ಸಚಿವಾಲಯ

### ನೂತನ ಸಂಪುಟದ ಮೊದಲ ಸಭೆಯಲ್ಲಿ ತೀರ್ಮಾನ

ಬೆಂಗಳೂರು, ಆ. 4 – ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವಾಲಯ ಸ್ಥಾಪನೆಗೆ ರಾಜ್ಯ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ನಡೆದ ನೂತನ ಸಚಿವ ಸಂಪುಟದ ಮೊದಲ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳ ಲಾಗಿದೆ.

ಪರಿಶಿಷ್ಟ ಪಂಗಡ ಸಮುದಾಯದ ಬಹುದಿನಗಳ ಬೇಡಿಕೆಯಂತೆ ಎಸ್.ಟಿ.ಪಿ. ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಪ್ರತ್ಯೇಕ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವಾಲಯ ಸ್ಥಾಪನೆಗೆ ತೀರ್ಮಾನಿಸಿರುವುದಾಗಿ ಬೊಮ್ಮಾಯಿ ಅವರು ಸಂಪುಟ ಸಭೆಯ ನಂತರ ಈ ವಿಷಯ ತಿಳಿಸಿದ್ದಾರೆ.

ಈ ಹಿಂದೆ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಒಂದೇ ಸಚಿವಾಲಯ ಇತ್ತು. ಒ.ಬಿ.ಸಿ.ಗೆ ಪ್ರತ್ಯೇಕ ಸಚಿವಾಲಯ ಇತ್ತು. ಪರಿಶಿಷ್ಟ ಪಂಗಡಗಳಿಗೆ ಸಂಬಂಧಿಸಿದ ಕೆಲಸಗಳನ್ನು ಚುರುಕುಗೊಳಿಸಲು ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದವರು ಹೇಳಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು (2ನೇ ಪುಟಕ್ಕೆ)

## ಒಬಿಸಿ ಪಟ್ಟಿ ರೂಪಿಸಲು ಅಧಿಕಾರ

### ಸಂವಿಧಾನಿಕ ತಿದ್ದುಪಡಿ ಮಸೂದೆಗೆ ಕೇಂದ್ರ ಸಂಪುಟದ ಸಮ್ಮತಿ

ನವದೆಹಲಿ, ಆ. 4 – ರಾಜ್ಯಗಳು ತಮ್ಮದೇ ಆದ ಇತರೆ ಹಿಂದುಳಿದ ವರ್ಗಗಳ ಪಟ್ಟಿ (ಒ.ಬಿ.ಸಿ.) ರೂಪಿಸಿಕೊಳ್ಳುವ ಅಧಿಕಾರ ನೀಡುವ ಸಂವಿಧಾನಿಕ ತಿದ್ದುಪಡಿ ಮಸೂದೆಗೆ ಕೇಂದ್ರ ಸಂಪುಟ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ. ಮಸೂದೆಯನ್ನು ಸಂಸತ್ತಿನ ಅನುಮೋದನೆಗಾಗಿ ಮಂಡಿಸಲಾಗುವುದು ಎಂದು ಮೂಲಗಳು ತಿಳಿಸಿವೆ. ಸಂವಿಧಾನದ 102ನೇ ತಿದ್ದುಪಡಿಯ ಕಾರಣದಿಂದಾಗಿ ರಾಜ್ಯಗಳು ಮೀಸಲಾತಿಗಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಹಿಂದುಳಿದವರ ಪಟ್ಟಿಯನ್ನು ರೂಪಿಸುವ ಅಧಿಕಾರ ಕಳೆದುಕೊಂಡಿವೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

2018ರಲ್ಲಿ 102ನೇ ಸಂವಿಧಾನಿಕ ತಿದ್ದುಪಡಿಯನ್ನು ಜಾರಿಗೆ ತರಲಾಗಿತ್ತು. ರಾಜ್ಯಗಳಿಗೆ ಇತರೆ ಹಿಂದುಳಿದ ವರ್ಗಗಳ ಪಟ್ಟಿ ರೂಪಿಸುವ ಅಧಿಕಾರ ಮತ್ತೆ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತರಲಾಗುತ್ತಿದೆ.

# ಸಂಪುಟದಲ್ಲಿ ಬಿಎಸ್‌ವೈ ಛಾಯೆ

## ಸಂಪುಟಕ್ಕೆ 29 ಸಚಿವರು, ಬಹುತೇಕರು ಹಿಂದಿನ ಸಂಪುಟದಲ್ಲಿದ್ದವರು

ಬೆಂಗಳೂರು, ಆ. 4- ಮಂತ್ರಿಮಂಡಲ ರಚನೆಗೆ ಕಳೆದ ಮೂರು ದಿನಗಳ ಸತತ ಪ್ರಯತ್ನದ ನಂತರ ಬಸವರಾಜ ಬೊಮ್ಮಾಯಿ ಅವರು ತಮ್ಮ ಸಂಪುಟಕ್ಕೆ ಕೆಲವು ಹೊಸಬರು ಸೇರಿದಂತೆ 29 ಮಂದಿಯನ್ನು ಸೇರ್ಪಡೆ ಮಾಡಿಕೊಂಡರು.

ಆದರೆ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಂಪುಟದ ಛಾಯೆಯೇ ಬೊಮ್ಮಾಯಿ ಮಂತ್ರಿಮಂಡಲದಲ್ಲೂ ಮೂಡಿದೆ.

ಯಡಿಯೂರಪ್ಪ ಸಂಪುಟದಲ್ಲಿ ಹಿರಿಯ ಸಚಿವರಾಗಿದ್ದ ಜಗದೀಶ್ ಶೆಟ್ಟರ್, ಸುರೇಶ್ ಕುಮಾರ್, ಲಕ್ಷ್ಮಣ ಸವದಿ, ಅರವಿಂದ ಲಿಂಬಾವಳಿ, ಸಿ.ಪಿ. ಯೋಗೇಶ್ವರ್, ಆರ್. ಶಂಕರ್ ಹಾಗೂ ಶ್ರೀಮಂತ ಪಾಟೀಲ್ ಸೇರಿದಂತೆ ಏಳು ಮಂದಿಯನ್ನು ಹೊರತುಪಡಿಸಿ ಉಳಿದ ಎಲ್ಲರೂ ಹಿಂದಿನ ಮಂತ್ರಿಮಂಡಲದಲ್ಲಿದ್ದವರೇ ಈ ಸಂಪುಟದಲ್ಲೂ ಮುಂದುವರೆದಿದ್ದಾರೆ.

ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ತಾವರ್‌ಚಂದ್ ಗೆಹ್ಲೋಟ್, 29 ಮಂದಿಗೆ ಸಚಿವರಾಗಿ ಪ್ರಮಾಣ ವಚನ ಬೋಧಿಸಿದರು. ಯಡಿಯೂರಪ್ಪ ಸಂಪುಟದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಗೋವಿಂದ ಕಾರಜೋಳ, ಸಿ.ಎಸ್. (2ನೇ ಪುಟಕ್ಕೆ)

### ದಾವಣಗೆರೆ ಸೇರಿ 13 ಜಿಲ್ಲೆಗಳಿಗೆ ಸಂಪುಟದಲ್ಲಿ ಸಿಗದ ಪ್ರಾತಿನಿಧ್ಯ


ಬೆಂಗಳೂರು, ಆ. 4- ಮೈಸೂರು, ಕೊಡಗು, ಹಾಸನ, ದಾವಣಗೆರೆ ಸೇರಿದಂತೆ 13 ಜಿಲ್ಲೆಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಪ್ರಾತಿನಿಧ್ಯವಿಲ್ಲ.

ಬಿ.ಎಸ್. ಯಡಿಯೂರಪ್ಪ ಸಂಪುಟದಲ್ಲೂ ಈ ಜಿಲ್ಲೆಗಳಿಗೆ ಪ್ರಾತಿನಿಧ್ಯ ದೊರೆತಿರಲಿಲ್ಲ, ಮುಖ್ಯಮಂತ್ರಿ ಸೇರಿದಂತೆ 30 ಮಂದಿ ಸಂಪುಟದಲ್ಲಿದ್ದರೂ ಬೆಂಗಳೂರು ನಗರ ಹಾಗೂ ಬೆಳಗಾವಿಗೆ ಹೆಚ್ಚು ಪ್ರಾತಿನಿಧ್ಯ ಗಿಟ್ಟಿಸಿಕೊಂಡು 13 ಜಿಲ್ಲೆಗಳಿಗೆ ಪ್ರಾತಿನಿಧ್ಯ ಇಲ್ಲದಂತಾಗಿದೆ. ಇದಲ್ಲದೆ, ರಾಮನಗರ, ಚಾಮರಾಜನಗರ, ಕಲಬುರಗಿ, ರಾಯಚೂರು, ವಿಜಯಪುರ, ಬಳ್ಳಾರಿ, ಕೋಲಾರ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಅವಕಾಶ ದೊರೆತಿಲ್ಲ. ಹೀಗಾಗಿ ಈ ಜಿಲ್ಲೆಗಳಿಗೆ ಹೊರ ಜಿಲ್ಲೆಗಳ ವಲಸಿಗರೇ ಉಸ್ತುವಾರಿ ಸಚಿವರಾಗಲಿದ್ದಾರೆ.

#### ವಲಸೆ ಉಸ್ತುವಾರಿ ಮತ್ತೆ ಮುಂದುವರಿಕೆ

ಬೆಂಗಳೂರು ನಗರಕ್ಕೆ 8 ಸ್ಥಾನ ದೊರೆತಿದ್ದರೆ, ಬೆಳಗಾವಿ, ತುಮಕೂರು, ಶಿವಮೊಗ್ಗ, ಬಾಗಲಕೋಟೆ, ದಕ್ಷಿಣ ಕನ್ನಡ, ಹಾವೇರಿ (2ನೇ ಪುಟಕ್ಕೆ)

### ಒಂದೆರಡು ದಿನಗಳಲ್ಲಿ ಖಾತೆ ಹಂಚಿಕೆ



ನೂತನ ಸಚಿವರಿಗೆ ಒಂದೆರಡು ದಿನಗಳಲ್ಲಿ ಖಾತೆಗಳನ್ನು ಹಂಚಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಯಾವ ನೂತನ ಸಚಿವರೂ ಹಿಂದಿನ ಖಾತೆ ನೀಡಬೇಕೆಂದು ಮನವಿ ಸಲ್ಲಿಸಿಲ್ಲ. ಈ ಹಿಂದೆ ಹದಿನೈದು ದಿನಗಳವರೆಗೆ ಸಂಪುಟ ರಚನೆಗೆ ಸಮಯ ಬೇಕಾಗುತ್ತಿತ್ತು. ನಾನು ಎರಡೇ ದಿನಗಳಲ್ಲಿ ಸಂಪುಟ ರಚಿಸಿದ್ದೇನೆ. ಖಾತೆ ಹಂಚಿಕೆಯನ್ನೂ ನಾನೇ ಮಾಡುತ್ತೇನೆ ಎಂದವರು ಹೇಳಿದರು.

ಸಚಿವ ಸ್ಥಾನ ಸಿಗದೇ ಅಸಮಾಧಾನ ಉಂಟಾಗಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಬೊಮ್ಮಾಯಿ, ಅಸಮಾಧಾನ ಹೊಂದಿರುವ ಶಾಸಕರ ಜೊತೆ ಮಾತನಾಡುತ್ತೇನೆ. ಅವರು ನಮ್ಮವರೇ. ಮುಂದೆ (3ನೇ ಪುಟಕ್ಕೆ)

### ವಿಜಯೇಂದ್ರಗೆ ಸಿಗದ ಅವಕಾಶ



ಬೆಂಗಳೂರು, ಆ. 4- ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಮ್ಮ ಪುತ್ರ ಬಿ.ವೈ. ವಿಜಯೇಂದ್ರ ಅವರನ್ನು ಬಸವರಾಜ ಬೊಮ್ಮಾಯಿ ಮಂತ್ರಿಮಂಡಲದಲ್ಲಿ ಸೇರ್ಪಡೆಗೊಳಿಸಲು ನಡೆಸಿದ ಯತ್ನ ಫಲಪ್ರದವಾಗಲಿಲ್ಲ.

ಬೊಮ್ಮಾಯಿ ಸಂಪುಟಕ್ಕೆ ತಮ್ಮ ಪುತ್ರ ವಿಜಯೇಂದ್ರ ಅವರನ್ನು ಸಚಿವರಾಗಿ ಹಾಗೂ ಆರ್. ಅಶೋಕ್ ಅವರನ್ನು (3ನೇ ಪುಟಕ್ಕೆ)

## ಭೂ ಪರಿವರ್ತನೆ ಕಡತಗಳನ್ನು ಸೂಕ್ಷ್ಮವಾಗಿ ಗಮನಿಸಿ

### ಜಿಲ್ಲೆಯ ತಹಶೀಲ್ದಾರರಿಗೆ ಪ್ರಾದೇಶಿಕ ಆಯುಕ್ತ ನವೀನ್‌ರಾಜ್ ಸಿಂಗ್ ಸೂಚನೆ

ದಾವಣಗೆರೆ, ಆ. 4- ತಹಶೀಲ್ದಾರರು ಭೂ ಪರಿವರ್ತನೆಗೆ ಸಂಬಂಧಿಸಿದ ವರದಿಗಳನ್ನು ಸಲ್ಲಿಸುವಾಗ ಕಡತಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ, ಬಳಿಕವೇ ವರದಿ ಸಲ್ಲಿಸಬೇಕು ಎಂದು ಪ್ರಾದೇಶಿಕ ಆಯುಕ್ತ ನವೀನ್‌ರಾಜ್ ಸಿಂಗ್ ಅವರು ತಹಶೀಲ್ದಾರ್‌ಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಲಾಗಿದ್ದ ಕಂದಾಯ ಇಲಾಖೆ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭೂ ಪರಿವರ್ತನೆ ಮಾಡಿಕೊಡುವುದಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಹೈಕೋರ್ಟ್‌ನಿಂದ ಕೆಲವು ತೀರ್ಪುಗಳು ಬಂದಿದ್ದು, ಭೂ ಪರಿವರ್ತನೆ ಅರ್ಜಿಗಳಿಗೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆ ಮಾಡಿ ತಹಶೀಲ್ದಾರರು ವರದಿ ನೀಡಬೇಕಿರುತ್ತದೆ. ಇಂತಹ ಸಂದರ್ಭದಲ್ಲಿ ಪ್ರತಿ ಪ್ರಕರಣಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು. ಬಳಿಕವೇ ಆಯಾ ಪ್ರಕರಣಗಳಿಗೆ ಅನುಗುಣವಾಗಿ ವರದಿ ಸಲ್ಲಿಸಬೇಕು ಎಂದು ಪ್ರಾದೇಶಿಕ ಆಯುಕ್ತರು ಸೂಚಿಸಿದರು.


ಜಿಲ್ಲೆಯಲ್ಲಿ ಈ ವರ್ಷ ಒಟ್ಟು 14 ಕಂದಾಯ ಅದಾಲತ್‌ಗಳನ್ನು ನಡೆಸಲಾಗಿದ್ದು, ಅದಾಲತ್‌ನಲ್ಲಿ ಪಹಣಿ ತಿದ್ದುಪಡಿಗೆ ಸಂಬಂಧಿಸಿದಂತೆ ಒಟ್ಟು 969 ಅರ್ಜಿಗಳು ಸ್ವೀಕೃತಗೊಂಡಿವೆ. 882 ಅರ್ಜಿಗಳನ್ನು ಇತ್ಯರ್ಥಪಡಿಸಲಾಗಿದೆ, 34 ತಿರಸ್ಕೃತಗೊಂಡಿವೆ. ಇನ್ನೂ 53 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಉಳಿದಿವೆ. ಖಾತೆ ಬದಲಾವಣೆಗೆ ಒಟ್ಟು 598 ಅರ್ಜಿಗಳು ಸ್ವೀಕೃತಗೊಂಡಿದ್ದು, 551 ಅರ್ಜಿಗಳನ್ನು ಇತ್ಯರ್ಥಪಡಿಸಿದೆ, 14 ತಿರಸ್ಕೃತಗೊಂಡಿದ್ದು, 33 ಇತ್ಯರ್ಥಕ್ಕೆ ಬಾಕಿ ಇವೆ. ಇತ್ಯರ್ಥಕ್ಕೆ ಬಾಕಿ ಇರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಕೂಡಲೇ ಕ್ರಮ ವಹಿಸುವಂತೆ ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಒಟ್ಟು 73 ಕಂದಾಯ ಗ್ರಾಮಗಳ ರಚನೆ ಕಾರ್ಯ ಆಗಬೇಕಿದ್ದು, ಈಗಾಗಲೇ 24 ಗ್ರಾಮಗಳಿಗೆ ಸಂಬಂಧಿಸಿದಂತೆ ಆಕಾರ್‌ಬಂದ್ ಸಿದ್ಧಪಡಿಸಿ, ಹೊಸ ಸರ್ವೆ ನಂಬರ್ ರಚಿಸಲಾಗಿದೆ, ಅಲ್ಲದೆ ಅಂತಿಮ ಅಧಿಸೂಚನೆ ಹೊರಡಿಸಲು ಸಿದ್ಧವಾಗಿದೆ ಎಂದು ಭೂ ದಾಖಲೆಗಳ ಉಪನಿರ್ದೇಶಕರು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಪ್ರಾದೇಶಿಕ ಆಯುಕ್ತರು ಹೊಸ ಕಂದಾಯ ಗ್ರಾಮಗಳ ಆಕಾರ್‌ಬಂದ್ ಸಿದ್ಧಪಡಿಸಿದ ಬಳಿಕ ಅವುಗಳನ್ನು ಡಿಜಿಟಲೈಸೇಷನ್ ಮಾಡುವಂತೆ ಸೂಚನೆ ನೀಡಿದರು.

ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ದಾವಣಗೆರೆ ತಾಲ್ಲೂಕಿನಲ್ಲಿ ಒಟ್ಟು 3095 ಎಕರೆ 21 ಗುಂಟೆಗಳ ಪೈಕಿ ಈಗಾಗಲೇ 2447 ಎಕರೆ ಒತ್ತುವರಿ ತೆರವುಗೊಳಿಸಲಾಗಿ ದೆ, 342 ಎಕರೆ ಸಾರ್ವಜನಿಕ ಬಳಕೆ, ಶಾಲೆ, ಸರ್ಕಾರಿ ಕಟ್ಟಡ, ದೇವಸ್ಥಾನ ಮುಂತಾದ ಕಾರಣಗಳಿಗಾಗಿ ತೆರವುಗೊಳಿಸಲು (2ನೇ ಪುಟಕ್ಕೆ)

## ಎರಡನೇ ಅಲೆ ಇನ್ನೂ ಮುಗಿದೇ ಇಲ್ಲ

### ಮೂರನೇ ಅಲೆ ಇನ್ನೂ ಬಂದಿಲ್ಲ ಎಂದ ಪರಿಣಿತರು



ನವದೆಹಲಿ ಆ. 4 - ದೇಶದಲ್ಲಿ ಹೊಸ ಕೊರೊನಾ ಪ್ರಕರಣಗಳು ಹೆಚ್ಚಾಗುತ್ತಿರುವ ಹಾಗೂ ಸೋಂಕು ಹರಡುವ ವೇಗ ಹೆಚ್ಚಾಗುತ್ತಿರುವ ಬಗ್ಗೆ ತಜ್ಞ ಪರಿಣಿತರು ಕಳವಳ ವ್ಯಕ್ತಪಡಿಸಿದ್ದಾ ರಾದರೂ, ಆತಂಕ ಪಡುವ ಅಗತ್ಯವಿಲ್ಲ ಎಂದಿದ್ದಾರೆ.

ಜನರು ಮಾಸ್ಕ್ ಧರಿಸಬೇಕು ಹಾಗೂ ಲಸಿಕೆ ಪಡೆಯಬೇಕು. ದೇಶದಲ್ಲಿ ಹೊಸ ಕೊರೊನಾ ಅಲೆ ಬಂದಿದೆ ಎಂದು ಈಗಲೇ ಹೇಳುವುದು ಅವಸರವಾಗುತ್ತದೆ ಎಂದಿದ್ದಾರೆ. ಪ್ರಸಕ್ತ ಎರಡನೇ ಕೊರೊನಾ ಅಲೆಯೇ ಇನ್ನೂ ಮುಗಿದಿಲ್ಲ. ಈಶಾನ್ಯದಲ್ಲಿ ಕೊರೊನಾ ಪ್ರಕರಣಗಳ ಮಟ್ಟ ಇನ್ನೂ ಕಡಿಮೆಯಾಗಿಲ್ಲ ಎಂದು ಹರಿಯಾಣದ ಅಶೋಕ ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ವಿಭಾಗದ ಪ್ರೊ. ಗೌತಮ್ ಮೆನನ್ ಹೇಳಿದ್ದಾರೆ.

ಹೀಗಾಗಿ ಪ್ರಸಕ್ತ ಕೊರೊನಾದ ಎರಡನೇ ಅಲೆಯೇ ಮುಂದುವರೆದಿದೆ ಎನ್ನಬಹುದೇ ಹೊರತು, ಹೊಸ ಅಲೆ ಬಂದಿದೆ ಎಂದು ಹೇಳಲಾಗದು. ಎರಡು ಅಲೆಗಳ ನಡುವೆ ಸಾಕಷ್ಟು ವ್ಯತ್ಯಾಸ ಇರುತ್ತದೆ ಎಂದವರು ತಿಳಿಸಿದ್ದಾರೆ.

ದೇಶದಲ್ಲಿ ಕೊರೊನಾ ಪರಿಸ್ಥಿತಿ ನಿಯಂತ್ರಣದಲ್ಲಿರುವಂತಿದೆ. ಆದರೆ, 13 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಳೆದ ವಾರ ಸೋಂಕು ಹೆಚ್ಚಾಗಿದೆ. ದೇಶದಲ್ಲಿ ಒಟ್ಟು ಪತ್ತೆಯಾಗುತ್ತಿರುವ ಪ್ರಕರಣಗಳಲ್ಲಿ ಅರ್ಧದಷ್ಟು ಕೇರಳದವಾಗಿವೆ.

ಕಳೆದ ವಾರ ಕೇರಳದಲ್ಲಿ 1.4 ಲಕ್ಷ ಹೊಸ ಕೊರೊನಾ ಸೋಂಕಿತರು ಕಂಡು ಬಂದಿದ್ದಾರೆ. ಅದಕ್ಕೂ ಹಿಂದಿನ ವಾರದಲ್ಲಿ 1.2 ಲಕ್ಷದಷ್ಟು ಸೋಂಕಿತರು ಕಂಡು ಬಂದಿದ್ದರು.

ಆಗಸ್ಟ್ 1ರಂದು (2ನೇ ಪುಟಕ್ಕೆ)

### ಸಮಗ್ರ ಶಿಕ್ಷಾ ಯೋಜನೆ ವಿಸ್ತರಣೆ

ನವದೆಹಲಿ, ಆ. 4 – ಶಾಲಾ ಶಿಕ್ಷಣಕ್ಕಾಗಿ ಸಮಗ್ರ ಶಿಕ್ಷಾ ಯೋಜನೆಯನ್ನು ಇನ್ನೂ ಐದು ವರ್ಷ ಕಾಲ ವಿಸ್ತರಿಸಲು ಕೇಂದ್ರ ಸಂಪುಟ ಸಮ್ಮತಿಸಿದೆ.

ಈ ಯೋಜನೆಯನ್ನು ಏಪ್ರಿಲ್ 1, 2021ರಿಂದ ಮಾರ್ಚ್ 31, 2026ರವರೆಗೆ ಮುಂದುವರೆಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ. ಸಮಗ್ರ ಶಿಕ್ಷಣ ಯೋಜನೆಯ ಎರಡನೇ ಅವಧಿಯ ಹಣಕಾಸು ಅನುದಾನ 2.94 ಲಕ್ಷ ಕೋಟಿ ರೂ. ಆಗಿರಲಿದೆ. ಇದರಲ್ಲಿ ಕೇಂದ್ರದ ಪಾಲು 1.85 ಲಕ್ಷ ಕೋಟಿ ರೂ. ಆಗಿದೆ.


### ಜಿಲ್ಲೆಯ ಕೊರೊನಾ, ನೆರೆ ನಿರ್ವಹಣೆಗೆ ಭೈರತಿ

ಬೆಂಗಳೂರು, ಆ. 4 – ಕೊರೊನಾ ನಿರ್ವಹಣೆ ಹಾಗೂ ನೆರೆ ಹಾವಳಿ ಪರಿಹಾರ ಕೆಲಸಗಳ ತ್ವರಿತ ಪರಿಶೀಲನೆ ಗಾಗಿ ಸಚಿವರುಗಳನ್ನು ಜಿಲ್ಲೆಗಳಿಗೆ ನೇಮಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆದೇಶ ಹೊರಡಿಸಿದ್ದಾರೆ. ದಾವಣಗೆರೆ ಜಿಲ್ಲೆಯ ಹೊಣೆಯನ್ನು ಸಚಿವ ಭೈರತಿ ಬಸವರಾಜ ಅವರಿಗೆ ನೀಡಲಾಗಿದೆ. ಬಸವರಾಜ ಅವರು ಈ ಹಿಂದೆ ಜಿಲ್ಲೆಯ ಉಸ್ತುವಾರಿ ಸಚಿವರೂ ಆಗಿದ್ದರು.

#### ಭದ್ರಾ ಜಲಾಶಯ


ಇಂದಿನ ಮಟ್ಟ : 183 ಅಡಿ $3^3/_4$ ಇಂಚು
ಒಳ ಹರಿವು: 8781 ಕ್ಯೂಸೆಕ್ಸ್
ಹೊರ ಹರಿವು : 3144 ಕ್ಯೂಸೆಕ್ಸ್
ಹಿಂದಿನ ವರ್ಷದ್ದು : 154.3 ಅಡಿ

### ಕುಂಟೋಜಿ ಶಾಂತಮ್ಮ ನಿಧನ



ದಾವಣಗೆರೆ ಸಿಟಿ ಎಂಸಿಸಿ ಬಿ ಬ್ಲಾಕ್ 8ನೇ ಮೇನ್ # 3037/1ರ ವಾಸಿ
ಲೇ. ಶ್ರೀ ಕುಂಟೋಜಿ ಚನ್ನಬಸಪ್ಪನವರ ಧರ್ಮಪತ್ನಿ
**ಶ್ರೀಮತಿ ಶಾಂತಮ್ಮ**
ಇವರು ದಿ. 4.08.2021 ರ ಬುಧವಾರ ಸಂಜೆ 4.10ಕ್ಕೆ ಸ್ವಗೃಹದಲ್ಲಿ ನಿಧನರಾದರು. ಮೃತರಿಗೆ 74 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.08.2021ರ ಗುರುವಾರ ಬೆಳಿಗ್ಗೆ 10.30ಕ್ಕೆ ಪಿ.ಬಿ ರಸ್ತೆಯ ವೈಕುಂಠ ಧಾಮದಲ್ಲಿ ನೆರವೇರಲಿದೆ.
ಇಂತಿ ದುಃಖತಪ್ತ ಕುಟುಂಬ ವರ್ಗ
94480 57677

### ಚಿರಸ್ಮರಣೆ



**ದಿ॥ ಕೆ.ಜಿ. ಗಂಗಾಧರಪ್ಪ**
ಮರಣ : 05.08.2001
ನೀವು ನಮ್ಮನ್ನಗಲಿ ಇಂದಿಗೆ 20 ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲಿರುವ,
ಶ್ರೀಮತಿ ಸುಧಾ ಗಂಗಾಧರಪ್ಪ ಮತ್ತು ಮಕ್ಕಳು
ಹಾಗೂ ಕುಟುಂಬ ವರ್ಗದವರು
ಹೆಚ್. ಕಲಪನಹಳ್ಳಿ, ದಾವಣಗೆರೆ ತಾಲ್ಲೂಕು.

### ಸವಿನೆನಪು



**ಲಿಂ॥ ಹೆಚ್. ಶಿವಪ್ಪನವರು**
ಮಾಜಿ ಸಚಿವರು
ನಿಮ್ಮ ಸ್ಮರಣೆಯಲ್ಲಿರುವ...
ಧರ್ಮಪತ್ನಿ : ಶ್ರೀಮತಿ ವನಮಾಲ ಶಿವಪ್ಪ
ಹೆಚ್.ಎಸ್. ಶಿವಶಂಕರ್
ಮಾಜಿ ಶಾಸಕರು, ಹರಿಹರ ವಿಧಾನಸಭಾ ಕ್ಷೇತ್ರ
ಹೆಚ್.ಎಸ್. ಅರವಿಂದ್
ಮಾಜಿ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್
ಮತ್ತು ಕುಟುಂಬ ವರ್ಗದವರು, ಬಂಧುಗಳು ಹಾಗೂ ಅಭಿಮಾನಿಗಳು.

**8 ನೇ ವರ್ಷದ ಪುಣ್ಯಸ್ಮರಣೆ ನೆನಪು–ನಮನ ಕಾರ್ಯಕ್ರಮ**
ದಿನಾಂಕ 10.08.2021ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ
ಸ್ಥಳ : ಹೆಚ್.ಕೆ. ವೀರಪ್ಪ ಕಲ್ಯಾಣ ಮಂಟಪ, ಶಿವಮೊಗ್ಗ ರಸ್ತೆ, ಹರಿಹರ.
(ದಿನಾಂಕ 05.08.2021ರ ಗುರುವಾರ ಬೆಳಿಗ್ಗೆ 10 ಗಂಟೆಗೆ, ಸಮಾಧಿ ಸ್ಥಳ ಬನ್ನಿಕೋಡಿನಲ್ಲಿ ಪೂಜೆ ಹಮ್ಮಿಕೊಳ್ಳಲಾಗಿದೆ.)

### ಹಾರ್ದಿಕ ಅಭಿನಂದನೆಗಳೊಂದಿಗೆ



**ಜನ್ಮ ದಿನದ ಶುಭಾಶಯಗಳು**
ಬೆಂಗಳೂರಿನ ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾದ
ಡಾ॥ ಜಿ.ಎನ್. ಕೃಷ್ಣಮೂರ್ತಿ
ಇವರ ಮಾರ್ಗದರ್ಶನದಲ್ಲಿ ಕಂಪ್ಯೂಟರ್ ಸೈನ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ
'ಕ್ರಿಪ್ಟೋಗ್ರಫಿ ಥೀಸಿಸ್ ಡಿಸೈನ್ ಆಫ್ ಕೀ ಷೆಡ್ಯೂಲಿಂಗ್ ಅಲ್ಗರಿದಮ್ಸ್ ಫಾರ್ ಬ್ಲಾಕ್ ಸೈಪರ್ಸ್'
ವಿಷಯ ಕುರಿತು ಪ್ರಬಂಧ ಮಂಡಿಸಿ, ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಿಂದ 'ಪಿಹೆಚ್‌ಡಿ' ಪದವಿಗೆ ಭಾಜನರಾಗಿರುವ
ದಾವಣಗೆರೆ ಜೆಜೆಎಂ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ॥ ಕೆ.ಬಿ. ಪ್ರಶಾಂತ್ ಅವರ ಪತ್ನಿ
**ಶ್ರೀಮತಿ ಸಿ. ರೇಖಾ** ಅವರಿಗೆ ಹಾರ್ದಿಕ ಅಭಿನಂದನೆಗಳು.

ಅಲ್ಲದೆ ಇಂದು ತಮ್ಮ ಹುಟ್ಟು ಹಬ್ಬದ ಸಂಭ್ರಮದಲ್ಲಿರುವ
**ಶ್ರೀಮತಿ ಸಿ. ರೇಖಾ ಪ್ರಶಾಂತ್**
ಅವರಿಗೆ ಜನ್ಮ ದಿನದ ಶುಭಾಶಯಗಳನ್ನು ಕೋರುತ್ತಾ, ಭಗವಂತನು ಅವರಿಗೆ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು ಶುಭ ಹಾರೈಸುವವರು...

- ತಂದೆ : ಜಿ.ಟಿ. ಚಂದ್ರಶೇಖರಪ್ಪ, ದಾವಣಗೆರೆ. ಮಾಜಿ ಸದಸ್ಯರು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು. ನಿವೃತ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ಕರ್ನಾಟಕ ಸರ್ಕಾರ
- ತಾಯಿ : ಶ್ರೀಮತಿ ಪುಷ್ಪ ಚಂದ್ರಶೇಖರಪ್ಪ
- ಸಹೋದರರಾದ : ಡಾ॥ ರೇಖಾ ಮತ್ತು ಡಾ. ಸಿ. ರಘು, ಬೆಳಗಾವಿ. ಶ್ರೀಮತಿ ಕರೀನಾ ಮತ್ತು ಸಿ. ರಾಜು, ಇಂಜಿನಿಯರ್, ಗೋವಾ.
- ಮಾವಂದಿರಾದ : ಡಿ. ಧರ್ಮಪ್ಪ ಮತ್ತು ಡಿ. ಕೆಂಚಪ್ಪ ಹಾಗೂ ಸಹೋದರರು, ಕುಟುಂಬದವರು, ಕಾಂಬಟ್ರಹಳ್ಳಿ, ಹರಪನಹಳ್ಳಿ ತಾ॥

**ಮನೆ ಬಾಡಿಗೆಗೆ ಇದೆ**
ಡಬಲ್ ಬೆಡ್‌ರೂಂ ಮನೆ, ಸೋಲಾರ್, ಬೋರ್, ಮುನ್ಸಿಪಲ್ ನೀರಿನ ವ್ಯವಸ್ಥೆ ಇದೆ. ಡಿ.ಸಿ.ಎಂ ಹಿಂಭಾಗ ಶಕ್ತಿನಗರ ರಾಜೇಂದ್ರ ಬಡಾವಣೆ, ದಾವಣಗೆರೆ.
ಸಸ್ಯಹಾರಿಗಳಿಗೆ ಮಾತ್ರ
**80950 06482**

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಸಿರ್‌ವಿನ್ಸ್ ಕೆಫೆ Team Member Job Qualification : 2nd PUC Pass/ Fail. House Keeping ಕೆಲಸಕ್ಕೆ ಬೇಕಾಗಿದ್ದಾರೆ. SSLC Pass/Fail
Address: Anjaneya Badavane, Netravathi Hostel Road, Davanagere
**93804 69079**

**ವಿದ್ಯಾನಗರ ಲಾಸ್ಟ್ ಬಸ್ ಸ್ಟಾಪ್ ಬನಶಂಕರಿ ಲೇಔಟ್‌ನಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
30x47, 30x47 East ಅಕ್ಕ-ಪಕ್ಕ, 30x50, 30x50 West ಅಕ್ಕ-ಪಕ್ಕ, 40x56 ಕಾರ್ನರ್, 30x40, 30x40 West ಅಕ್ಕ-ಪಕ್ಕ
**ಐನಳ್ಳಿ ಚನ್ನಬಸಪ್ಪ ಏಜೆಂಟ್**
**99166 12110**

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
**Mob: 95913 10082**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**91132 85992**

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್.'ಎ' ಬ್ಲಾಕ್ (ಎಂಬಿಎ ಕಾಲೇಜ್ ಹತ್ತಿರ) ಉತ್ತರ 30x42,ಕೆಳಗೆ ಮನೆ ಮೇಲೆ ಮನೆ ಮತ್ತು 1 ಮಳಿಗೆ, ಉತ್ತರ 30x50 ಕೆಳಗೆ ಮನೆ ಮೇಲೆ ಮನೆ ಅದರ ಮೇಲೆ 2 ರೂಂ , ಎಂಸಿಸಿ ಬಿ ಬ್ಲಾಕ್ ಪೂರ್ವ ಡೂಪ್ಲೆಕ್ಸ್ 44x60
**ಐಗೂರು ವಿಜಯ್‌ಕುಮಾರ್**
**99457 02495**

**ಸೈಟ್‌ಗಳು ಮಾರಾಟಕ್ಕಿವೆ**
30x38, 30x38 East ಅಕ್ಕ-ಪಕ್ಕ ವಿವೇಕಾನಂದ ಬಡಾವಣೆಯಲ್ಲಿ, 30x40, 30x40 West ಅಕ್ಕ-ಪಕ್ಕ ಅಥಣಿ ಕಾಲೇಜ್ ಹತ್ತಿರ, 70x50 ಕಾರ್ನರ್ ಆಂಜನೇಯ ಬಡಾವಣೆಯಲ್ಲಿ
**ಐನಳ್ಳಿ ಚನ್ನಬಸಪ್ಪ ಏಜೆಂಟ್**
**99166 12110**

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು ಹತ್ತಿರ, 1 BHK ಮನೆ ಮತ್ತು 1 ರೂಂ ಬಾಡಿಗೆಗಿದೆ.
(ಸಸ್ಯಹಾರಿಗಳಿಗೆ ಮಾತ್ರ)
**94499 42404, 79751 07721**

**HOUSE TO LET**
2 BHK, 2 Floor Furnished Modern House Vidyanagar Main Road Opposite Post Office.
Contact : **Anil**
**94498 33024**

**ಮಹಡಿ ಬಾಡಿಗೆಗೆ ಇದೆ**
ಕೆ.ಆರ್. ಮಾರ್ಕೆಟ್ ನಲ್ಲಿ ಆಫೀಸ್ / ಬ್ಯಾಂಕ್, ಕಚೇರಿಗೆ ಬೇಕಾದ 24x120 ಅಡಿಯುಳ್ಳ ಜಾಗ, ಮೊದಲನೆ ಮಹಡಿ ಬಾಡಿಗೆಗೆ ಇದೆ. (ಕಟ್ಟಡದಲ್ಲಿದೆ) (ರೂ. 40/- ಅಡಿ) ಸಂಪರ್ಕಿಸಿ :
**82177 21635**

**ಹೊಸ ಹೊಸ ಮನೆಗಳು ಮಾರಾಟಕ್ಕಿವೆ**
30x50 North ಡೂಪ್ಲೆಕ್ಸ್ 4 ಬೆಡ್‌ರೂಂ ಮನೆ ಡಾಬಾ ಸ್ಟಾಪ್ ಹತ್ತಿರ, 40x60 West, 2 ಬೆಡ್‌ರೂಂ ಮನೆ ಸಿದ್ದವೀರಪ್ಪ ಬಡಾವಣೆ, 30x50 West, ಹೈಟೆಕ್ ಲೇಔಟ್‌ನಲ್ಲಿ
**ಐನಳ್ಳಿ ಚನ್ನಬಸಪ್ಪ ಏಜೆಂಟ್**
**99166 12110**

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ (ಶಿವಗಂಗೆ ಕಲ್ಯಾಣ ಮಂಟಪ ಹಿಂಭಾಗ) ಪೂರ್ವ ಮತ್ತು ಪಶ್ಚಿಮ 30x40 ಪೂರ್ವ ಮತ್ತು ಉತ್ತರ (ಕಾರ್ನರ್), 30x70, ದಕ್ಷಿಣ 40x60 ಬಾಲಾಜಿ ಲೇಔಟ್ (ಶಿವಗಂಗೆ ಸರ್ಕಲ್ ಹತ್ತಿರ) ಪೂರ್ವ 40x60, ದಕ್ಷಿಣ 40x60
**ಐಗೂರು ವಿಜಯ್‌ಕುಮಾರ್**
**99457 02495**

**ಬೇಕಾಗಿದ್ದಾರೆ**
ಔಷಧ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ : **ಅಮರಾವತಿ ಹಾಲಪ್ಪ**
**98454 84076**

**ಬೇಕಾಗಿದ್ದಾರೆ**
ಮಿಲ್ಟ್ರಿ ಹೋಟೆಲ್ ನಲ್ಲಿ ಕೆಲಸ ಮಾಡಲು ಕುಕ್ ಅಸಿಸ್ಟೆಂಟ್, ಸಪ್ಲೈಯರ್ ಮತ್ತು ಕ್ಲೀನರ್ ಬೇಕಾಗಿದ್ದಾರೆ.
**ಸಂಪರ್ಕಿಸಿ : ಪವಾರ್ ಫ್ಯಾಮಿಲಿ ರೆಸ್ಟೋರೆಂಟ್**
ಸಿತಾರಾ ಹೋಟೆಲ್ ಪಕ್ಕ,ಪಿ.ಬಿ.ರಸ್ತೆ, ದಾವಣಗೆರೆ.
**ಮೊ: 93410 83995**

**ಮನೆ ಬಾಡಿಗೆಗೆ ಇದೆ**
ಸಿಂಗಲ್ ಬೆಡ್ ರೂಮ್ ಮತ್ತು ಡಬಲ್ ಬೆಡ್ ರೂಮ್ ಮನೆ ಬಾಡಿಗೆಗೆ ಇದೆ
(ಸಸ್ಯಹಾರಿಗಳಿಗೆ ಮಾತ್ರ)
ಸ್ಥಳ: ನಿಜಲಿಂಗಪ್ಪ ಲೇಔಟ್ ಸರ್ಕಾರಿ ನೌಕರರ ಭವನ ಹತ್ತಿರ
**77605 62788**

**Hotel Foodies**
ವೆಯ್ಟರ್, ಕ್ಯಾಪ್ಟನ್, ಕೌಂಟರ್ ಸರ್ವೀಸ್, ಬಿಲ್ಲಿಂಗ್‌ಗೆ ಬೇಕಾಗಿದ್ದಾರೆ.
ಸಂಪರ್ಕಿಸಿ
**98861 56688**
**88614 12999**

**ಆ್ಯಂಕರ್ ಬೇಕಾಗಿದ್ದಾರೆ.**
YouTube ಚಾನೆಲ್‌ನಲ್ಲಿ ಜಾಹೀರಾತಿಗೆ ಆಕರ್ಷಕ ಹಾಗೂ ಒಳ್ಳೆಯ communication ಸ್ಕಿಲ್ ಇರುವ ಹುಡುಗಿಯರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ. ದೂರವಾಣಿ ಸಂಖ್ಯೆ :
**97392 94066**

**ಆಯಾ ಬೇಕಾಗಿದ್ದಾರೆ**
Winners Career Acdemy 2nd Main P.J. Extn, opp Vinayaka Medical, Davanagere
**90192 33504**

**WANTED**
Sales Man/ Sales Girls For Garments Shop. Contact Immedietly
**98862 54644**

**House To-Let**
2BHK 'Santrupthi' # 1640/66-67, Saraswati Badavane, Davanagere. Veg only
**94484 46708**

**ಸೈಟು ಮಾರಾಟಕ್ಕಿವೆ**
30x40 ಅಳತೆಯ ಡೋರ್.ನಂ. ಆಗಿರುವ 2 ಸೈಟುಗಳು ಮಾರಾಟಕ್ಕಿವೆ. ವಿಳಾಸ : ಹೊಸ RTO ಆಫೀಸ್ ಇಂದ 500 ಮೀಟರ್ ದೂರದಲ್ಲಿ ದಾವಣಗೆರೆ.
**88844 19930, 88844 19937**

**ಬೇಕಾಗಿದ್ದಾರೆ**
* ಊದಿನಕಡ್ಡಿ (ಅಗರಬತ್ತಿ) ಮೆಷಿನ್ ಆಪರೇಟರ್-15 (ಮಹಿಳೆಯರು ಮಾತ್ರ)
* ಐ.ಟಿ.ಐ. ಫಿಟ್ಟರ್ ಆಪರೇಟರ್-05
ಇಂಡಸ್ಟ್ರೀಯಲ್ ಎಸ್ಟೇಟ್ ಲೋಕಿಕೆರೆ ರೋಡ್, ದಾವಣಗೆರೆ.
**ಇಸ್ಮಾಯಿಲ್- 97433 41341**
**ಬಸವರಾಜ್- 99720 56330, 90083 56190**

**Avoid Mosquitoes**
Mosquito Net for Doors and Windows
**Sri Gowri Enterprises**
# 7C2, 4th Cross, Near D.C Office, Karuru Industrial Area, P.B. Road, Davanagere
**72049 94628**

**ಮನೆ ಬಾಡಿಗೆಗೆ /ಲೀಸ್‌ಗೆ ಇದೆ**
ನಗರದ ಮಧ್ಯಭಾಗದಲ್ಲಿರುವ ಮಂಡಿಪೇಟೆಯ #699/1, 2 ಬೆಡ್‌ರೂಂವುಳ್ಳ ಮನೆ ಬಾಡಿಗೆಗೆ/ ಲೀಸ್‌ಗೆ ಲಭ್ಯವಿದೆ. ಮುನ್ಸಿಪಲ್ ಹಾಗೂ ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ. ಸಂಪರ್ಕಿಸಿ
**87626 76076**

**ಪ್ರವೇಶ ಪ್ರಕಟಣೆ**
**ಕರೆಸ್ಪಾಂಡೆನ್ಸ್/ ರೆಗ್ಯುಲರ್**
SSLC, PUC, BA, BCom, BSc, MA, MCom, MSc, MBA, All PG & Diploma Courses
**S.S. Global Institute for Higher Education, Davanagere.**
**72593 59861, 99863 45266**

**ಸೇಲ್ಸ್ ಬಾಯ್ಸ್ / ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸಿಟಿಜನ್ಸ್ ದಾ, ಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.
**93421 95459**

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಗರ್ಲ್ಸ್, ಸೇಲ್ಸ್ ಮನ್ ಮತ್ತು ಅಂಗಡಿ ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ
**79752 83579**

**ಗೃಹ ಸಾಲಗಳಿಗಾಗಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಮಾರ್ಟ್‌ಗೇಜ್ ಸಾಲಗಳಿಗಾಗಿ
ಸಂಪರ್ಕಿಸಿ :
**81472 61158**

**ಡಾ|| ಸೋಮಶೇಖರ್. ಎಸ್.ಎ.**
ಕೀಲು, ಮೂಳೆ ತಜ್ಞರು **Rheumatologist** (ರುಮಟಾಯ್ಡ್ ಆರ್ಥರೈಟಿಸ್) ಬೆಂಗಳೂರು ಇವರು ದಿ. 04.08.2021ರ ಬುಧವಾರ ಮತ್ತು 05.08.2021ರ ಗುರುವಾರದಂದು ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
**ಅನುಗ್ರಹ ಆಸ್ಪತ್ರೆ**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
**08192-222292**

**WANTED**
Boys and girls required for data entry & billing at Food Mart Supermarket, MCC B Block Davangere.
Qualification : B.com
**98864 63531**

**ನೀರಿನ ಲೀಕೇಜ್**
**(ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**ಮೊ. 9538777582**
ಕೆಲಸ 100% ಗ್ಯಾರಂಟಿ.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
**ನಂ.1 ವಶೀಕರಣ ಸ್ಪೆಷಲಿಸ್ಟ್**
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
**89716 99826**


**ಮಳಿಗೆ ಬಾಡಿಗೆಗಿದೆ**
ಪಿಸಾಳೆ ಕಾಂಪೌಂಡ್, 3ನೇ ಅಡ್ಡ ರಸ್ತೆ, ಶ್ರೀನಿವಾಸ ಮಿಲ್ಟ್ರಿ ಹೋಟೆಲ್ ಪಕ್ಕ 10x32 ಅಡಿ ಅಳತೆಯುಳ್ಳ ಮಳಿಗೆ ಬಾಡಿಗೆಗಿದೆ. ಆಸಕ್ತರು ಸಂಪರ್ಕಿಸಿ:
**97407 70399**
**80739 12767**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಹೆಸರು ಬದಲಾವಣೆ**
ಡೈಸಿ ಆರ್. ತಂದೆ ಲೇಟ್ ರಮೇಶ್ ಜಿ.ವಿ., 25 ವರ್ಷ #868/ಸಿ 789, ಶಂಕರ್ ವಿಹಾರ ಬಡಾವಣೆ, ಟೆಲಿಫೋನ್ ಆಫೀಸ್ ಹತ್ತಿರ ದಾವಣಗೆರೆ ವಾಸಿಯಾದ ನಾನು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿದ್ದು, St. Francis Xavier Church, Chandavar-581323, Honnavar Taluk, ಚರ್ಚ್‌ನ ಜ್ಞಾನ ಸ್ನಾನದ ದಾಖಲೆಯ ರಿಜಿಸ್ಟರ್ ನಂ.7103ರಲ್ಲಿ ನನ್ನ ಹೆಸರು ಚಿಂತನ ಆರ್. ಎಂದು ನಮೂದಾಗಿದ್ದು, ನನ್ನ ಶಾಲಾ-ಕಾಲೇಜು ಇನ್ನಿತರೆ ಎಲ್ಲಾ ದಾಖಲೆಯಲ್ಲಿ ನನ್ನ ಹೆಸರು ಡೈಸಿ ಆರ್. ಎಂದು ನಮೂದಾಗಿದೆ ಆದ್ದರಿಂದ ಸದರಿ ಈ ಮೇಲ್ಕಂಡ ಚರ್ಚ್‌ನ ಜ್ಞಾನ ಸ್ನಾನದ ದಾಖಲೆಯಲ್ಲಿ ನನ್ನ ಹೆಸರನ್ನು ಡೈಸಿ ಆರ್ ಎಂದು ತಿದ್ದು ಪಡಿ ಮಾಡಬೇಕಾಗಿದ್ದು ದಿನಾಂಕ 14.07.2021 ರಂದು ನೋಟರಿ ದಾವಣಗೆರೆ ಮುಂದೆ ಪ್ರಮಾಣೀಕರಿಸಿದ್ದೇನೆ. ಸಹಿ:- **ಡೈಸಿ ಆರ್.**

**VS Paramedical College**
SSLC ಪಾಸ್/puc- ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ
Course (DHI)
DIPLOMA HEALTH INSPECTOR
ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್ ದಾವಣಗೆರೆ.
**9019580600, 8553278258**

**ಐದನೇ ವರ್ಷದ ಪುಣ್ಯ ಸ್ಮರಣೆ**



**ದಿ|| ಕೆ.ಎಂ. ರುದ್ರಪ್ಪನವರು**
ಮ್ಯಾನೇಜರ್, **ಶಾಮನೂರು ಕಲ್ಲಪ್ಪ ಅಂಡ್ ಸನ್ಸ್**, ದಾವಣಗೆರೆ.
ನೀವು ನಮ್ಮನ್ನಗಲಿ ಇಂದಿಗೆ ಐದು ವರ್ಷಗಳಾದವು,
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿರುವ.
ಧರ್ಮಪತ್ನಿ : **ಶ್ರೀಮತಿ ಅನಸೂಯಮ್ಮ ಕೆ.ಆರ್.**
**ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

**Sahyadri Paramedical College**
ಸಹ್ಯಾದ್ರಿ ಪ್ಯಾರಾ ಮೆಡಿಕಲ್ ಕಾಲೇಜ್, ದಾವಣಗೆರೆ.
ಪ್ರವೇಶ ಪ್ರಕಟಣೆ 2021-22
Course: **DHI (HEALTH INSPECTOR)**
**SSLC** ಪಾಸಾದವರಿಗೆ-3 ವರ್ಷ
PUC ಸೈನ್ಸ್ ಪಾಸಾದವರಿಗೆ - 2 ವರ್ಷ
**Contact : 77601 55550**
**(shilpa K., Secretary)**

**ಬೇಕಾಗಿದ್ದಾರೆ**
ನೋಂದಾಯಿತ ಚಿಟ್ ಫಂಡ್ ಕಂಪನಿ (ರಿ)ಗೆ ಡೆವಲಪ್‌ಮೆಂಟ್ ಆಫೀಸರ್‌ಗಳು ಬೇಕಾಗಿದ್ದಾರೆ.
Qualification : PUC & Any degree, Experience in Finance Company Davanagere
**92421 18010**
**99648 10381**

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
**ಅಸ್ತಮಾ, ಕೀಲು ನೋವು**
**ಡಾ|| ಎಸ್.ಎಂ. ಸೇಠ್. ಫೋನ್ : 96322 95561**
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.


# ಸಚಿವ ಸಂಪುಟದಲ್ಲಿ ಬಿಎಸ್‌ವೈ ಛಾಯೆ



**(1ನೇ ಪುಟದಿಂದ)** ಅಶ್ವತ್ಥನಾರಾಯಣ, ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ, ಆರ್. ಅಶೋಕ್, ಬಿ.ಶ್ರೀರಾಮುಲು, ವಿ.ಸೋಮಣ್ಣ, ಉಮೇಶ್ ಕತ್ತಿ, ಎಸ್. ಅಂಗಾರ, ಜೆ.ಸಿ. ಮಾಧುಸ್ವಾಮಿ, ಸಿ.ಸಿ. ಪಾಟೀಲ್, ಆನಂದ್ ಸಿಂಗ್ ಮತ್ತೆ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಇವರಲ್ಲದೆ, ಕೋಟಾ ಶ್ರೀನಿವಾಸ ಪೂಜಾರಿ, ಪ್ರಭು ಚವ್ಹಾಣ್, ಮುರುಗೇಶ್ ನಿರಾಣಿ, ಶಿವರಾಂ ಹೆಬ್ಬಾರ್, ಎಸ್.ಟಿ. ಸೋಮಶೇಖರ್, ಬಿ.ಸಿ. ಪಾಟೀಲ್, ಭೈರತಿ ಬಸವರಾಜ್, ಡಾ.ಕೆ. ಸುಧಾಕರ್, ಕೆ. ಗೋಪಾಲಯ್ಯ, ಎಂ.ಟಿ.ಬಿ. ನಾಗರಾಜ್, ಕೆ.ಸಿ. ನಾರಾಯಣಗೌಡ ಹಾಗೂ ಶಶಿಕಲಾ ಜೊಲ್ಲೆ ಅವರುಗಳು ಬೊಮ್ಮಾಯಿ ಸಂಪುಟದಲ್ಲೂ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಹಳೆ ಮುಖಗಳ ಜೊತೆ ಆರಗ ಜ್ಞಾನೇಂದ್ರ, ಬಿ.ಸಿ. ನಾಗೇಶ್, ವಿ. ಸುನೀಲ್ ಕುಮಾರ್, ಹಾಲಪ್ಪ ಆಚಾರ್, ಶಂಕರ್ ಬಿ. ಪಾಟೀಲ್ ಹಾಗೂ ಮುನಿರತ್ನ ಇದೇ ಮೊದಲ ಬಾರಿಗೆ ಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದರು.

ಮುಖ್ಯಮಂತ್ರಿ ಸೇರಿದಂತೆ ಸಂಪುಟ ಗಾತ್ರ 30ಕ್ಕೆ ತಲುಪಿದ್ದು, ಇನ್ನೂ ನಾಲ್ಕು ಸ್ಥಾನಗಳನ್ನು ಬೊಮ್ಮಾಯಿ ಅವರು ಉಳಿಸಿಕೊಂಡಿದ್ದಾರೆ.

ಯಡಿಯೂರಪ್ಪ ಮಂತ್ರಿಮಂಡಲದಲ್ಲಿ ಮೂರು ಮಂದಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಲಾಗಿತ್ತು, ಬೊಮ್ಮಾಯಿ ಸಂಪುಟದಲ್ಲೂ ನಾಲ್ವರಿಗೆ ಉಪಮುಖ್ಯಮಂತ್ರಿ ಸ್ಥಾನ ಕಲ್ಪಿಸಲು ಬಿಜೆಪಿ ವರಿಷ್ಠರು ತೀರ್ಮಾನ ಕೈಗೊಂಡಿದ್ದರು.

ಮುಖ್ಯಮಂತ್ರಿ ಆಪ್ತ ಆರ್. ಅಶೋಕ್ ಅವರಿಗೆ ಉಪಮುಖ್ಯಮಂತ್ರಿ ಸ್ಥಾನ ಕೊಡಿಸಲು ಬೊಮ್ಮಾಯಿ ಕೊನೆವರೆಗೆ ನಡೆಸಿದ ಯತ್ನ ವಿಫಲವಾದ ನಂತರ ಸದ್ಯಕ್ಕೆ ಯಾರನ್ನೂ ಉಪಮುಖ್ಯಮಂತ್ರಿ ಮಾಡುವುದು ಬೇಡ ಎಂದು ವರಿಷ್ಠರಿಗೆ ಮಾಡಿಕೊಂಡ ಮನವಿ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಈ ನಿರ್ಧಾರವನ್ನು ಕೈಬಿಡಲಾಗಿದೆ.

ಮೂರು ದಿನಗಳಿಂದ ಮಂತ್ರಿಮಂಡಲ ರಚನೆಗೆ ಮುಖ್ಯಮಂತ್ರಿ ಅವರು, ಪಕ್ಷದ ವರಿಷ್ಠರೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದರಾದರೂ ಇಂದು ಬೆಳಗ್ಗೆ 10 ಗಂಟೆಗೆ ಸದಸ್ಯರ ಪಟ್ಟಿ ಅಂತಿಮಗೊಂಡು ಬೊಮ್ಮಾಯಿ ಕೈಸೇರಿತು.

ಪಟ್ಟಿ ಕೈಸೇರುವ ವೇಳೆಗೆ ರಾತ್ರಿ ಇದ್ದ ಆರು ಹೆಸರುಗಳು ಮಾಯವಾಗಿ ಯಡಿಯೂರಪ್ಪನವರ ಶಿಫಾರಸ್ಸಿನಂತೆ ಕೆಲವರು ಹಳಬರನ್ನೇ ಮುಂದುವರೆಸಲು ವರಿಷ್ಠರು ತೀರ್ಮಾನಿಸಿದರು. ಇದರಿಂದ ಮಂತ್ರಿಯಾಗುವಂತೆ ನಿನ್ನೆ ರಾತ್ರಿ ಪರೋಕ್ಷ ಸೂಚನೆ ಪಡೆದಿದ್ದವರ ಹೆಸರು ಇಂದು ಬೆಳಗಾಗುವ ವೇಳೆಗೆ ಪಟ್ಟಿಯಿಂದ ಮಾಯವಾಗಿತ್ತು.

ಮಾಯವಾದವರ ಪಟ್ಟಿಯಲ್ಲಿದ್ದ ಎಸ್.ಎ. ರಾಮದಾಸ್, ದತ್ತಾತ್ರೇಯ ಪಾಟೀಲ್ ರೇವೂರ, ರಾಜೂಗೌಡ, ಆರ್.ಪೂರ್ಣಿಮಾ ಶ್ರೀನಿವಾಸ್, ಎಂ.ಪಿ. ರೇಣುಕಾಚಾರ್ಯ, ಬಸನಗೌಡ ಪಾಟೀಲ್ ಯತ್ನಾಳ್, ಅರವಿಂದ ಬೆಲ್ಲದ್ ಅವರಿಗೆ ನಿರಾಸೆ ಕಾದಿತ್ತು.

ಸಂಘ ಪರಿವಾರದಿಂದ ರೇಣುಕಾಚಾರ್ಯ ಹೊರತುಪಡಿಸಿ, ಉಳಿದವರ ಹೆಸರನ್ನು ವರಿಷ್ಠರಿಗೆ ಶಿಫಾರಸ್ಸು ಮಾಡಲಾಗಿತ್ತು.

ಯಡಿಯೂರಪ್ಪ ತಮ್ಮ ಪುತ್ರ ಬಿ.ವೈ. ವಿಜಯೇಂದ್ರ ಮಂತ್ರಿಯಾಗುವ ಅವಕಾಶ ತಪ್ಪಿದ್ದರಿಂದ ಕೊನೆ ಗಳಿಗೆಯಲ್ಲಿ ಅವರ ಬೆಂಬಲಿಗರಾಗಿ ಹಿಂದಿನ ಸಂಪುಟದಲ್ಲಿ ಸಚಿವರಾಗಿದ್ದ ಗೋವಿಂದ ಕಾರಜೋಳ, ಜೆ.ಸಿ. ಮಾಧುಸ್ವಾಮಿ, ಸಿ.ಸಿ. ಪಾಟೀಲ್, ಶಶಿಕಲಾ ಜೊಲ್ಲೆ, ಎಂ.ಟಿ.ಬಿ. ನಾಗರಾಜ್, ಶಿವರಾಂ ಹೆಬ್ಬಾರ್, ಮುನಿರತ್ನ ಅವರಿಗೆ ಅವಕಾಶ ನೀಡುವಂತೆ ಮಾಡಿದ ಶಿಫಾರಸ್ಸಿಗೆ ವರಿಷ್ಠರು ಹಸಿರು ನಿಶಾನೆ ತೋರಿದ್ದರಿಂದ ಅಧಿಕಾರ ದಕ್ಕಿತು.

## ಎಸ್.ಟಿ. ಕಲ್ಯಾಣ ಸಚಿವಾಲಯ

**(1ನೇ ಪುಟದಿಂದ)** ಮಾರ್ಚ್‌ನಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಮಹಿಳೆಯರ ರಕ್ಷಣೆ ಮತ್ತು ಸಬಲೀಕರಣ ಯೋಜನೆಗೆ ರೂಪಿಸಿದ ಯೋಜನೆಗಳ ಜಾರಿಗಾಗಿ ಮುಖ್ಯಮಂತ್ರಿ ನೇತೃತ್ವದ ಸಮಿತಿಯೊಂದನ್ನು ರಚಿಸಲಾಗುವುದು ಎಂದು ಬೊಮ್ಮಾಯಿ ಹೇಳಿದ್ದಾರೆ.

ಎಸ್.ಸಿ.ಪಿ.- ಟಿ.ಎಸ್.ಪಿ. ಯೋಜನೆ ಗಳಿಗೆ ಮುಖ್ಯಮಂತ್ರಿ ನೇತೃತ್ವದ ಸಮಿತಿ ಇರುವ ರೀತಿಯಲ್ಲೇ ಮಹಿಳಾ ಸಬಲೀಕರಣ ಕ್ಕಾಗಿ ಸಮಿತಿ ರಚಿಸಿ ಅಭಿಯಾನ ಕೈಗೊಳ್ಳ ಲಾಗುವುದು ಎಂದವರು ತಿಳಿಸಿದ್ದಾರೆ.

ಕೋವಿಡ್ ಟಾಸ್ಕ್ ಫೋರ್ಸ್ ಅನ್ನು ಪುನರ್ ರಚಿಸಲು ತೀರ್ಮಾನ ತೆಗೆದುಕೊಳ್ಳ ಲಾಗಿದೆ. ಸರ್ಕಾರ ಬದಲಾವಣೆಯಾದ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ. ಖಾತೆಗಳ ಹಂಚಿಕೆಯಾದ ಮೇಲೆ ಸಂಬಂಧ ಪಟ್ಟ ಸಚಿವರ ನೇತೃತ್ವದಲ್ಲಿ ಸಮಿತಿ ಕಾರ್ಯ ನಿರ್ವಹಿಸಲಿದೆ ಎಂದವರು ಹೇಳಿದರು. ಎಲ್ಲ ಸಚಿವರಿಗೆ ಕೊರೊನಾ ಹಾಗೂ ಪ್ರವಾಹದ ಪರಿಸ್ಥಿತಿ ಪರಿಶೀಲಿಸಲು ಜಿಲ್ಲೆಗಳನ್ನು ನಿಯೋಜಿಸಲಾಗುವುದು. ಅವರು ತಕ್ಷಣವೇ ನಿಯೋಜಿಸಲಾದ ಜಿಲ್ಲೆಗಳಿಗೆ ತೆರಳಿ ಕ್ರಮ ತೆಗೆದುಕೊಳ್ಳಬೇಕು. ನಾಳೆಯಿಂದಲೇ ಅವರು ಕಾರ್ಯ ನಿರ್ವಹಿಸಲಿದ್ದಾರೆ ಎಂದು ಸಿಎಂ ತಿಳಿಸಿದರು.

ಹೆಚ್ಚಿನ ಪರಿಹಾರ ಕ್ರಮಗಳ ಅಗತ್ಯವಿದ್ದರೆ ಸರ್ಕಾರಕ್ಕೆ ಸಚಿವರು ವರದಿ ಸಲ್ಲಿಸಲಿದ್ದಾರೆ ಎಂದವರು ಹೇಳಿದರು.

## ಕಡತಗಳನ್ನು ಸೂಕ್ಷ್ಮವಾಗಿ ಗಮನಿಸಿ



**(1ನೇ ಪುಟದಿಂದ)** ಸಾಧ್ಯವಾಗಿಲ್ಲ, ಇನ್ನೂ 306 ಎಕರೆ ತೆರವುಗೊಳಿಸುವುದು ಬಾಕಿ ಇದೆ. ಹರಿಹರ ತಾಲ್ಲೂಕಿನಲ್ಲಿ 336.18 ಎಕರೆ, ಚನ್ನಗಿರಿ ತಾಲ್ಲೂಕಿನಲ್ಲಿ 482.12 ಎಕರೆ, ಜಗಳೂರು ತಾಲ್ಲೂಕಿನಲ್ಲಿ 469.24 ಎಕರೆ ಒತ್ತುವರಿ ತೆರವು ಬಾಕಿ ಇದೆ ಎಂದು ಆಯಾ ತಹಶೀಲ್ದಾರರು ವರದಿ ಸಲ್ಲಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪ್ರಾದೇಶಿಕ ಆಯುಕ್ತರು, ಸರ್ಕಾರಿ ಜಮೀನು ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು ವಿಶೇಷ ಸಭೆ ಕರೆದು, ಕೂಡಲೇ ಒತ್ತುವರಿ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ಕ್ರಮ ವಹಿಸಬೇಕು ಎಂದು ನವೀನ್‌ರಾಜ್ ಸಿಂಗ್ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ಕಂದಾಯ ಇಲಾಖೆಯ ಇಸ್ಲಾಮುದ್ದೀನ್ ಸೇರಿದಂತೆ, ಜಿಲ್ಲೆಯ ಎಲ್ಲ ತಹಶೀಲ್ದಾರರು ಭಾಗವಹಿಸಿದ್ದರು.

## ಎರಡನೇ ಅಲೆ ಇನ್ನೂ ಮುಗಿದೇ ಇಲ್ಲ

**(1ನೇ ಪುಟದಿಂದ)** ಅಂತ್ಯಗೊಂಡ ವಾರದಲ್ಲಿ ದೆಹಲಿ, ಹಿಮಾಚಲ ಪ್ರದೇಶ, ಉತ್ತರಾಖಂಡ, ಮಿಜೋರಾಂ, ಜಮ್ಮುಮತ್ತುಕಾಶ್ಮೀರ, ಸಿಕ್ಕಿಂ ಹಾಗೂ ಕರ್ನಾಟಕಗಳಲ್ಲೂ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗಿತ್ತು.

ಕೊರೊನಾ ಹರಡುವ ವೇಗವನ್ನು ಸೂಚಿಸುವ ಆರ್ - ಮೌಲ್ಯ ಸಹ ಹೆಚ್ಚಾಗುತ್ತಿದೆ. ಮೇ 7ರ ನಂತರ ಮೊದಲ ಬಾರಿಗೆ ಆರ್ - ಮೌಲ್ಯ 1ಕ್ಕಿಂತ ಹೆಚ್ಚಾಗಿದೆ ಎಂದು ಚೆನ್ನೈನ ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸಸ್ ವರದಿ ತಿಳಿಸಿದೆ.

ಕೇರಳವಷ್ಟೇ ಅಲ್ಲದೇ, ಚೆನ್ನೈ, ಕೋಲ್ಕೊತಾ, ಬೆಂಗಳೂರು ಹಾಗೂ ದೆಹಲಿಗಳಂತಹ ನಗರಗಳಲ್ಲೂ ಆರ್ ಮೌಲ್ಯ 1ಕ್ಕಿಂತ ಹೆಚ್ಚಾಗಿದೆ. ಇದು ಸಕ್ರಿಯ ಸೋಂಕಿತರ ಸಂಖ್ಯೆ ವಿವಿಧೆಡೆ ಹೆಚ್ಚಾಗುತ್ತಿರುವುದನ್ನು ತೋರಿಸುತ್ತದೆ ಎಂದು ಇನ್‌ಸ್ಟಿಟ್ಯೂಟ್ ಆಫ್ ಮ್ಯಾಥಮೆಟಿಕಲ್ ಸೈನ್ಸಸ್‌ನ ಸಿತಾಬ್ರ ಸಿನ್ಹ ಹೇಳಿದ್ದಾರೆ.


ಕೊರೊನಾದ ಮೂರನೇ ಅಲೆ ಆರಂಭವಾಗಿದೆ ಎಂದು ಈಗಲೇ ಹೇಳುವುದು ತಪ್ಪಾಗುತ್ತದೆ. ಆದರೆ, ಸೋಂಕು ಹೆಚ್ಚಾಗುತ್ತಿರುವುದು ಕಳವಳಕಾರಿ ಎಂದು ವಿಜ್ಞಾನಿ ಗೌತಮ್ ಮೆನನ್ ಹೇಳಿದ್ದಾರೆ.

ಕೊರೊನಾ ಪ್ರಕರಣಗಳು ಹೆಚ್ಚಾಗುತ್ತವೆ ಎಂಬುದನ್ನು ಪರಿಗಣಿಸಲು ಮುಂದಿನ ವಾರಗಳು ಪ್ರಮುಖವಾಗಿವೆ. ಪ್ರಸಕ್ತ ಸೋಂಕು ದಕ್ಷಿಣ ಹಾಗೂ ಈಶಾನ್ಯ ರಾಜ್ಯಗಳಿಗೆ ಸೀಮಿತವಾಗಿದೆ. ಇದು ದೇಶದ ಇತರೆ ಭಾಗಗಳಿಗೆ ಹರಡುತ್ತದೆಯೇ ಎಂಬುದನ್ನು ಕಾದುನೋಡಬೇಕಿದೆ ಎಂದವರು ತಿಳಿಸಿದ್ದಾರೆ.

ಮೂರನೇ ಅಲೆ ಆರಂಭವಾಗಿದೆ ಎಂದು ಈಗಲೇ ಹೇಳುವುದು ಸೂಕ್ತವಾಗದು. ಕಳೆದ ವಾರಕ್ಕೆ ಹೋಲಿಸಿದರೆ, ಈ ವಾರ ಕಂಡು ಬಂದ ಸೋಂಕಿತರ ಸಂಖ್ಯೆ ಯಥಾಸ್ಥಿತಿಯಲ್ಲಿದೆ. ರಾಷ್ಟ್ರೀಯ ಸರಾಸರಿಯಲ್ಲಿ ಬದಲಾವಣೆಯಾಗಿಲ್ಲ ಎಂದು ದೆಹಲಿಯ ಶಿವ ನಾಡರ್ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ನ್ಯಾಚುರಲ್ ಸೈನ್ಸಸ್‌ನ ಡೀನ್ ಸಂಜೀವ್ ಗಲಂಡೆ ಹೇಳಿದ್ದಾರೆ.

ಪ್ರಸಕ್ತ 40 ಸಾವಿರದವರೆಗೆ ಕೊರೊನಾ ಸೋಂಕಿತರು ಕಂಡು ಬರುತ್ತಿದ್ದಾರೆ. ಇಷ್ಟಾದರೂ, ಮೇ ತಿಂಗಳಿಗೆ ಹೋಲಿಸಿದರೆ ಇದು ಸಾಕಷ್ಟು ಕಡಿಮೆ ಪ್ರಕರಣವಾಗಿದೆ ಎಂದವರು ತಿಳಿಸಿದ್ದಾರೆ.

## ಎಸ್ಟಿಗೆ ಸಚಿವಾಲಯ : ಶ್ರೀ ಸಂತಸ



ಮಲೇಬೆನ್ನೂರು, ಆ.4- ರಾಜ್ಯದಲ್ಲಿ ಪರಿಶಿಷ್ಟ ಪಂಗಡ ಸಮುದಾಯದ ಬಹುದಿನಗಳ ಬೇಡಿಕೆಯಂತೆ ಎಸ್‌ಟಿಪಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗಿ ಪ್ರತ್ಯೇಕ ಪರಿಶಿಷ್ಠ ಪಂಗಡಗಳ ಕಲ್ಯಾಣ ಸಚಿವಾಲಯ ಸ್ಥಾಪನೆಗೆ ಇಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನ ಗೊಂಡಿರುವುದನ್ನು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸ್ವಾಗತಿಸಿದ್ದಾರೆ.

2020ರ ಫೆಬ್ರವರಿ 9 ರಂದು ರಾಜನಹಳ್ಳಿ ಮಠದಲ್ಲಿ ಜರುಗಿದ 2ನೇ ವರ್ಷದ ವಾಲ್ಮೀಕಿ ಜಾತ್ರೆಯಲ್ಲಿ ಅಂದು ಸಿಎಂ ಆಗಿದ್ದ ಯಡಿಯೂರಪ್ಪ ಅವರು ಎಸ್ಟಿ ಜನಾಂಗದ ಶ್ರೇಯೋಭಿವೃದ್ಧಿಗೆ ಮತ್ತು ಕುಂದುಕೊರತೆಗಳನ್ನು ಪರಿಹರಿಸಲು ಪ್ರತ್ಯೇಕ ಸಚಿವಾಲಯವನ್ನು ಪ್ರಾರಂಭಿಸುವುದಾಗಿ ಘೋಷಣೆ ಮಾಡಿ, 2020-21ನೇ ಆಯವ್ಯಯದಲ್ಲಿ ಸೇರಿಸಲು ಆದೇಶಿಸಿದ್ದರು.

ಆದಷ್ಟು ಬೇಗ ಎಸ್ಟಿ ಮೀಸಲಾತಿಯನ್ನೂ ಶೇ. 7.5 ಕ್ಕೆ ಹೆಚ್ಚಿಸುವಂತೆ ಶ್ರೀಗಳು ಸರ್ಕಾರವನ್ನು ಒತ್ತಾಯಿಸಿದ್ದಾರೆ.

## ನಾಟಿ ವೈದ್ಯ ಬಿ. ಹೊಸೂರಪ್ಪಗೆ ವಾಲ್ಮೀಕಿ ಸಮಾಜದಿಂದ ಸನ್ಮಾನ



ಹರಪನಹಳ್ಳಿ, ಆ.4- ಗೌರವ ಡಾಕ್ಟರೇಟ್ ಪದವಿಗೆ ಭಾಜನರಾದ ಬಾಗಳಿ ಗ್ರಾಮದ ಹೆಸರಾಂತ ಕೀಲು, ಮೂಳೆ ನಾಟಿ ಔಷಧಿ ವೈದ್ಯ ತಾಲ್ಲೂಕು ಗಂಗಾಮತ ಸಮಾಜದ ಅಧ್ಯಕ್ಷ ಬಿ. ಹೊಸೂರಪ್ಪ ಅವರನ್ನು ವಾಲ್ಮೀಕಿ ನಾಯಕ ಸಮಾಜದಿಂದ ಸನ್ಮಾನಿಸಿ, ಗೌರವಿಸಲಾಯಿತು. ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೆ.ಉಚ್ಚೆಂಗೆಪ್ಪ, ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಟಿ. ಚಂದ್ರಪ್ಪ, ಉಪಾಧ್ಯಕ್ಷ ಮಂಡಕ್ಕಿ ಸುರೇಶ್, ಪ್ರಧಾನ ಕಾರ್ಯದರ್ಶಿ ಟಿ.ಬಿ. ರಾಜು ಇನ್ನಿತರರಿದ್ದರು.

## ಸರ್ಕಾರಿ ಬಸ್ - ಬೈಕ್ ನಡುವೆ ಡಿಕ್ಕಿ ಚಕ್ರದಡಿ ಸಿಲುಕಿ ತರಗಾರನ ಸಾವು

ದಾವಣಗೆರೆ, ಆ.4- ಸರ್ಕಾರಿ ಬಸ್ ಮತ್ತು ಬೈಕ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವಿಗೀಡಾದ ಘಟನೆ ತಾಲ್ಲೂಕಿನ ಕುರ್ಕಿ ಹಾಗೂ ತೊಗಲೇರಿ ಗ್ರಾಮಗಳ ಮಧ್ಯೆ ಸಾಯಿಬಾಬಾ ದೇವಸ್ಥಾನದ ಬಳಿ ಇಂದು ಸಂಜೆ 7 ಗಂಟೆ ಸುಮಾರಿಗೆ ನಡೆದಿದೆ.

ಚಿಕ್ಕತೊಗಲೇರಿ ಗ್ರಾಮದ ನಾಗರಾಜ್ (30) ಮೃತಪಟ್ಟ ದುರ್ದೈವಿ. ತರಗಾರನಾಗಿರುವ ನಾಗರಾಜ್ ಕುರ್ಕಿಯಿಂದ ವಾಪಸ್ ಚಿಕ್ಕತೊಗಲೇರಿ ಗ್ರಾಮಕ್ಕೆ ಬೈಕ್ ನಲ್ಲಿ ತೆರಳುತ್ತಿದ್ದ. ಈ ವೇಳೆ ಎದುರಿಗೆ ಚನ್ನಗಿರಿಯಿಂದ ದಾವಣಗೆರೆ ಕಡೆಗೆ ಬರುತ್ತಿದ್ದ ಸಾರಿಗೆ ಬಸ್ ನಡುವೆ ಡಿಕ್ಕಿ ಸಂಭವಿಸಿದ್ದು, ಈ ವೇಳೆ ನಾಗರಾಜ್ ಬೈಕ್ ಸಮೇತ ಬಸ್ ಚಕ್ರದಡಿಯೇ ಬಿದ್ದಿದ್ದು, ಚಕ್ರ ಆತನ ಮೇಲೆಯೇ ಹರಿದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಈ ಸಂಬಂಧ ಹದಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಿಗದ ಪ್ರಾತಿನಿಧ್ಯ

**(1ನೇ ಪುಟದಿಂದ) ಜಿಲ್ಲೆಗಳಿಗೆ ಸಂಪುಟದಲ್ಲಿ ತಲಾ ಎರಡು ಸ್ಥಾನಗಳು ದೊರೆತಿವೆ.**

**ನೂತನ ಮಂತ್ರಿಮಂಡಲದಲ್ಲಿ ಬೊಮ್ಮಾಯಿ ಸೇರಿದಂತೆ ಎಂಟು ಮಂದಿ ಲಿಂಗಾಯತರಿಗೆ ಅವಕಾಶ ದೊರೆತಿದ್ದರೆ, ನಂತರ ಒಕ್ಕಲಿಗ ಹಾಗೂ ಹಿಂದುಳಿದ ಸಮುದಾಯಕ್ಕೆ ತಲಾ ಏಳು, ಪರಿಶಿಷ್ಟ ಜಾತಿ ಮೂರು, ಪರಿಶಿಷ್ಟ ವರ್ಗಕ್ಕೆ ಸೇರಿದ ಒಬ್ಬರು, ಇಬ್ಬರು ಬ್ರಾಹ್ಮಣ ಸಮುದಾಯದವರಿಗೆ ಮಂತ್ರಿಗಿರಿ ಲಭಿಸಿದೆ.**

## ಶಾಮನೂರು ಮುದೋಳರ ರಾಮಚಂದ್ರಪ್ಪ ನಿಧನ



ದಾವಣಗೆರೆ ತಾಲ್ಲೂಕು ಶಾಮನೂರು ಗ್ರಾಮದ ವಾಸಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಮುದೋಳರ ರಾಮಚಂದ್ರಪ್ಪ (84) ಇವರು ದಿನಾಂಕ 4.08.2021ರ ಬುಧವಾರ ಮಧ್ಯಾಹ್ನ 1.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 5.08.2021 ಗುರುವಾರ ಮಧ್ಯಾಹ್ನ 12.30ಕ್ಕೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

## ಶಾಸಕ ಕರುಣಾಕರ ರೆಡ್ಡಿ ಕ್ಷೇತ್ರ ನಿರ್ಲಕ್ಷಿಸಿದ್ದಾರೆ



ಹರಪನಹಳ್ಳಿ, ಆ.4- ಶಾಸಕ ಜಿ. ಕರುಣಾಕರ ರೆಡ್ಡಿ ಅವರು ಇಲ್ಲಿಯವರೆಗೂ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡದೆ, ಸಂಕಷ್ಟದಲ್ಲಿರುವ ಜನರ ಸಮಸ್ಯೆ ಆಲಿಸದೇ ಕ್ಷೇತ್ರವನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಶಶಿಧರ್ ಪೂಜಾರ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ತಮ್ಮ ನಿವಾಸದಲ್ಲಿ ಕಾಂಗ್ರೆಸ್ ಮುಖಂಡರು, ಅಭಿಮಾನಿಗಳ ಜೊತೆಗೆ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಟಿಎಪಿಎಂಎಸ್ ನಿರ್ದೇಶಕ ಗಿಡ್ಡಳ್ಳಿ ನಾಗರಾಜ್, ಯುವ ಕಾಂಗ್ರೆಸ್ ಉಪಾಧ್ಯಕ್ಷ ಟಿ. ಪ್ರವೀಣ್ ಕುಮಾರ್, ಯುವ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಸಂಚಾಲಕ ಆರ್.ಮಾಂತೇಶ್ ನಾಯ್ಕ, ಎನ್‌ಎಸ್‌ಯುಐ ಅಧ್ಯಕ್ಷ ಶ್ರೀಕಾಂತ್ ಯಾದವ್, ಮುಖಂಡರಾದ ಎಂ.ಕೆ. ರಾಯಲ್ ಸಿದ್ಧಿಕ್, ರಿಯಾಜ್ ಅಹ್ಮದ್, ಬಸವರಾಜ್ ಭಂಡಾರಿ, ಯರ್ರಿಸ್ವಾಮಿ, ಪೈಲ್ವಾನ್ ಅಬ್ದುಲ್ ರೆಹಮಾನ್, ಸೋಗಿ ಇಬ್ರಾಹಿಂ, ನೂರುದ್ದೀನ್, ಸಮೀಉಲ್ಲಾ, ಶಾಕಿರ್ ಅಲಿ, ಬಿ.ಎಲ್. ಬೀರೇಶ್, ಶಂಷುದ್ದೀನ್ ಕೋಲ್ಕರ್, ರಂಜಿತ್ ಪೂಜಾರ್, ಮನ್ಸೂರ್, ಮೋಹನ್ ಕುಮಾರ್, ವಿಜಯಕುಮಾರ್ ಶೃಂಗಾರತೋಟ, ಡಿ. ಮಂಜು, ನಯಾಜ್, ಬಸವರಾಜ್, ಸಲೀಂ ಲಾಟಿ ಹುಸೇನ್ ಇನ್ನಿತರೆ ಕಾಂಗ್ರೆಸ್ ಯುವ ಮುಖಂಡರು ಪಾಲ್ಗೊಂಡಿದ್ದರು.

## ಯಲ್ಲಪ್ಪ ಕಾಡೇರಗೆ ಡಾಕ್ಟರೇಟ್



ರಾಣೇಬೆನ್ನೂರು, ಆ.4- ಸ್ಥಳೀಯ ದೇವಿಕಾ ಶಿಕ್ಷಣ ಸಂಸ್ಥೆಯ ಉಪನ್ಯಾಸಕ ಎಲ್ಲಪ್ಪ ಕಾಡೇರ ಅವರಿಗೆ ನವದೆಹಲಿಯ ಗ್ಲೋಬಲ್ ವರ್ಚ್ಯುವಲ್ ಅಕಾಡೆಮಿ ಫಾರ್ ಪೀಸಸ್ ಅಂಡ್ ಎಜುಕೇಷನ್ ಅವರು ಕನ್ನಡ ಭಾಷೆ ಹಾಗೂ ಗ್ರಾಮೀಣ ಸಂಸ್ಕೃತಿ ಸೇವೆ ಪರಿಗಣಿಸಿ ಗೌರವ ಡಾಕ್ಟರೇಟ್ ನೀಡಿದ್ದು, ದೇವಿಕಾ ಸಂಸ್ಥೆಯ ಅಧ್ಯಕ್ಷ ಸಿ. ಆರ್. ಪಾಟೀಲ ಹಾಗೂ ಬೋಧಕ ವರ್ಗ ಅಭಿನಂದಿಸಿದೆ.

# ಶಾಸಕರಿಂದ ಯೋಧ ಬೀರಪ್ಪಗೆ ಸ್ವಾಗತ




ಹರಿಹರ

ಹರಿಹರ, ಆ.4- ಭಾರತೀಯ ಸೇನೆಯಲ್ಲಿ 23 ವರ್ಷಗಳ ಕಾಲ ಸೇವೆ ಸಲ್ಲಿಸಿ, ನಿವೃತ್ತಿ ಪಡೆದು ಸ್ವಗ್ರಾಮ ಭಾನುವಳ್ಳಿಗೆ ನಿನ್ನೆ ಆಗಮಿಸಿದ ವೀರ ಯೋಧ ಕೆ.ಎಸ್.ಬೀರಪ್ಪ ಅವರನ್ನು ಹರಿಹರ ರೈಲ್ವೆ ನಿಲ್ದಾಣದಲ್ಲಿ ಶಾಸಕ ಎಸ್.ರಾಮಪ್ಪ ಹೂಗುಚ್ಛ ನೀಡಿ ಸ್ವಾಗತಿಸಿದರು.

ಈ ಸಂದರ್ಭದಲ್ಲಿ ಬೀರಪ್ಪ ಅವರ ಸೇವೆಯನ್ನು ಪ್ರಶಂಶಿಸಿದರು. ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್ ಸೇರಿ ದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದು, ಬೀರಪ್ಪ ಅವರನ್ನು ಬರ ಮಾಡಿಕೊಂಡರು.

**ಮೆರವಣಿಗೆ :** ಗುರುವಾರ ಮಧ್ಯಾಹ್ನ 2.30ಕ್ಕೆ ಭಾನುವಳ್ಳಿ ಗ್ರಾಮದಲ್ಲಿ ಕೆ.ಎಸ್. ಬೀರಪ್ಪ ಅವರಿಗೆ ಅದ್ದೂರಿ ಮೆರವಣಿಗೆ ಮೂಲಕ ಸನ್ಮಾನಿಸುವ ಕಾರ್ಯಕ್ರಮವನ್ನು ಗ್ರಾಮಸ್ಥರು ಹಮ್ಮಿಕೊಂಡಿದ್ದಾರೆ.

# ಚಿನ್ನಕ್ಕಾಗಿ ರವಿ ಸೆಣಸಾಟ ; ಕಂಚಿಗೆ ಸೀಮಿತವಾದ ಲವ್ಲಿನಾ



ಚಿಬಾ (ಜಪಾನ್), ಆ. 4 – ಒಲಿಂಪಿಕ್ಸ್‌ನ ಕುಸ್ತಿಯ 57 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ ರವಿ ದಹಿಯಾ ಅವರು ಕೊನೆ ಕ್ಷಣಗಳ ಹೋರಾಟದಲ್ಲಿ ಗೆಲುವು ಸಾಧಿಸಿದ್ದು, ಬಂಗಾರದ ಪದಕ್ಕಾಗಿ ಸೆಣಸಲಿದ್ದಾರೆ. ಅಂತಿಮ ಹಂತಕ್ಕೆ ತಲುಪಿದ ಭಾರತದ ಎರಡನೇ ಕುಸ್ತಿ ಪಟು ಅವರಾಗಿದ್ದಾರೆ.

ಕಜಕಿಸ್ತಾನದ ನುರಿಸ್ಲಾಮ್ ಸನಯೇವ್ ಅವರನ್ನು ದಹಿಯಾ ಸೋಲಿಸಿದ್ದಾರೆ. ಈ ಹಿಂದೆ ಸುಶೀಲ್ ಕುಮಾರ್ ಅವರು 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಅಂತಿಮ ಪಂದ್ಯದಲ್ಲಿ ಪಾಲ್ಗೊಂಡು ಬೆಳ್ಳಿ ಪದಕ ಪಡೆದಿದ್ದರು. ದಹಿಯ ಅವರು ಈಗ ಕನಿಷ್ಠ ಬೆಳ್ಳಿ ಪದಕವನ್ನು ಭಾರತಕ್ಕೆ ಖಚಿತಪಡಿಸಿದ್ದಾರೆ. ಬಂಗಾರಕ್ಕಾಗಿ ಅವರು ಮುಂದಿನ ಸೆಣಸಾಟ ನಡೆಸಲಿದ್ದಾರೆ. ನಾಲ್ಕನೇ ಶ್ರೇಯಾಂಕದ ದಹಿಯ ಅವರು ಸನಯೇವ್ ವಿರುದ್ಧ 2-9 ಅಂತರದಿಂದ ಹಿಂದಿದ್ದರು. ಪಂದ್ಯ ಮುಗಿಯಲು ಕೆಲವೇ ಕ್ಷಣಗಳಿದ್ದಾಗ ಚೇತರಿಸಿಕೊಂಡ ದಹಿಯ, ಎದುರಾಳಿಯನ್ನು ಡಬಲ್ ಲೆಗ್ ದಾಳಿಗೆ ಸಿಲುಕಿಸಿ ಗೆಲುವು ಸಾಧಿಸಿದ್ದಾರೆ.

ಗೆಲುವಿನ ನಂತರ ಮಾತನಾಡಿರುವ ದಹಿಯ, ಸನಯೇವ್ ಅವರನ್ನು ಎರಡು ಬಾರಿ ಸೋಲಿಸಿದ್ದೇನೆ. ಈ ಬಾರಿ ಅಷ್ಟೊಂದು ಪಾಯಿಂಟ್‌ಗಳ ಮುನ್ನಡೆ ಕೊಡುವ ಅಗತ್ಯವಿರಲಿಲ್ಲ. ಈ ಬಗ್ಗೆ ನನಗೆ ಸಂತೋಷವೇನೂ ಇಲ್ಲ ಎಂದಿದ್ದಾರೆ.

ಅಂಕಗಳ ಮುನ್ನಡೆ ಬಿಟ್ಟು ಕೊಟ್ಟು, ಇದು ತೀರಾ ಹತ್ತಿರದ ಹೋರಾಟವಾಗುವಂತೆ ಮಾಡಿದೆ. ಇದು ನನಗೆ ಹಿನ್ನಡೆ ತಂದಿದೆ. ನನ್ನ ಕೆಲಸ ಇನ್ನೂ ಮುಗಿದಿಲ್ಲ. ನನ್ನ ಗುರಿ ಇನ್ನೂ ಈಡೇರಿಲ್ಲ ಎನ್ನುವ ಮೂಲಕ ಕುಸ್ತಿ ಪಟು ತಮ್ಮ ಬಂಗಾರದ ಪದಕ ಪಡೆಯುವ ಕನಸು ಹಂಚಿಕೊಂಡಿದ್ದಾರೆ.

ಗುರುವಾರ ನಡೆಯಲಿರುವ ಅಂತಿಮ ಪಂದ್ಯದಲ್ಲಿ ಅವರು ಹಾಲಿ ವಿಶ್ವ ಚಾಂಪಿಯನ್ ರಷ್ಯಾದ ಜವುರ್ ಉಗಯೇವ್ ಅವರನ್ನು ಎದುರಿಸಲಿದ್ದಾರೆ. 2019ರ ವಿಶ್ವ ಚಾಂಪಿಯನ್‌ನಲ್ಲಿ ಉಗೇವ್ ವಿರುದ್ಧ ದಹಿಯಾ ಸೋಲು ಕಂಡಿದ್ದರು.

ಬುಧವಾರದ ಪಂದ್ಯದಲ್ಲಿ ದಹಿಯಾ ಆರಂಭಿಕ ಮುನ್ನಡೆ ಕಂಡಿದ್ದರು. ಆದರೆ, ಎಡಗಾಲನ್ನು ಗುರಿಯಾಗಿಟ್ಟುಕೊಂಡು ಸನಯೇವ್ ನಡೆಸಿದ ದಾಳಿಯಿಂದಾಗಿ ಆರು ಅಂಕಗಳ ಹಿನ್ನಡೆ ಕಂಡರು. ಪಂದ್ಯ ಮುಗಿಯಲು ಒಂದು ನಿಮಿಷ ಇರುವಾಗ ಅವರ ಹಿನ್ನಡೆ 2-9ರ ಹಂತಕ್ಕೆ ಹೋಗಿತ್ತು.

ಆದರೆ, ಹೆಚ್ಚು ದೃಢತೆ ಹಾಗೂ ತಾಂತ್ರಿಕ ಪರಿಣಿತಿ ಹೊಂದಿರುವ ದಹಿಯ, ಧೃತಿಗೆಡದೇ ಸನಯೇವ್ ಅವರನ್ನು ಡಬಲ್ ಲೆಗ್ ದಾಳಿಗೆ ಸಿಲುಕಿಸಿದರು.


ಸನಯೇವ್ ಅವರನ್ನು ಬೆನ್ನನ್ನು ಬಿಗಿಯಾಗಿ ನೆಲಕ್ಕೊತ್ತುವ ಮೂಲಕ ಗೆಲುವು ದಾಖಲಿಸಿದರು. ಈ ಹಿಂದಿನ ಎರಡೂ ಪಂದ್ಯಗಳನ್ನು ದಹಿಯ ತಾಂತ್ರಿಕ ಪರಿಣಿತಿಯಿಂದಾಗಿ ಸುಲಭವಾಗಿ ಗೆದ್ದಿದ್ದರು.

## ಬಾಕ್ಸರ್ ಲವ್ಲಿನಾಗೆ ಕಂಚು



ಭಾರತೀಯ ಬಾಕ್ಸರ್ ಲವಿನಾ ಬೊರ್ಗೊಹೇನ್ ಅವರು ಒಲಿಂಪಿಕ್ ಪಂದ್ಯಾವಳಿಯ 69 ಕೆಜಿ ಕುಸ್ತಿ ವಿಭಾಗದಲ್ಲಿ ಹಾಲಿ ವಿಶ್ವ ಚಾಂಪಿಯನ್ ಬುಸೆನಾಜ್ ಸುರ್ಮೆ ನೇಲಿ ವಿರುದ್ಧ 0-5 ಅಂತರದ ಸೋಲು ಕಂಡಿದ್ದಾರೆ. ಇದರಿಂದಾಗಿ ಅವರು ಕಂಚಿನ ಪದಕ ಮಾತ್ರ ಪಡೆಯಲು ಸಾಧ್ಯವಾಗಿದೆ. ಟರ್ಕಿಯ ಬಲಿಷ್ಠ ಬಾಕ್ಸರ್ ಸುರ್ಮೆನೇಲಿ ಪ್ರಬಲ ಹೋರಾಟಕ್ಕೆ ಬೊರ್ಗೊಹೇನ್ ತಿರುಗೇಟು ನೀಡಲು ಸಾಧ್ಯವಾಗಲಿಲ್ಲ. ರೆಫರೀ ಸೂಚನೆಗಳ ಹೊರತಾಗಿಯೂ ಎಚ್ಚರಿಕೆಗಳನ್ನು ಪರಿಗಣಿಸದ ಕಾರಣ ಎರಡನೇ ಸುತ್ತಿನಲ್ಲಿ ಬೊರ್ಗೊಹೇನ್ ಒಂದು ಅಂಕದ ಕಡಿತ ಸಹ ಎದುರಿಸಬೇಕಾಯಿತು.

# ನಗರದಲ್ಲಿ ಇಂದು ನಾಮದೇವ ಮಹಾರಾಜರ ಸಂಜೀವಿನಿ ಸೋಹಳಾ



ಎಸ್.ಕೆ.ಪಿ. ರಸ್ತೆಯಲ್ಲಿರುವ ಶ್ರೀ ವಿಠಲ್ ಮಂದಿರದಲ್ಲಿ ಇಂದು ಸಂಜೆ 6 ಗಂಟೆಗೆ ಸಂತ ಶ್ರೇಷ್ಠ ಶಿರೋಮಣಿ ಶ್ರೀ ನಾಮದೇವ ಮಹಾರಾಜರ 671 ನೇ ಸಂಜೀವಿನಿ ಸೋಹಳಾ (ಪುಣ್ಯಾರಾಧನೆ) ಆಚರಣೆ ಮಾಡಲಾಗುವುದು ಎಂದು ನಾಮದೇವ ಸಿಂಪಿ ಸಮಾಜ ದೈವ ಮಂಡಳಿ ಅಧ್ಯಕ್ಷ ಜಗನ್ನಾಥ ಎಸ್. ಗಂಜೀಗಟ್ಟಿ ತಿಳಿಸಿದ್ದಾರೆ.

ಪುಣ್ಯಾರಾಧನೆ ಅಂಗವಾಗಿ ಸಂತ ಮಂಡಳಿಯವರಿಂದ ಪೋತಿ ಸ್ಥಾಪನೆ, ಭಜನೆ, ಕಾಕಡಾರತಿ ಮತ್ತು ಮಹಾಮಂಗಳಾರತಿ ನಡೆಯಲಿದೆ. ನಾಳೆ ಶುಕ್ರವಾರ ಬೆಳಿಗ್ಗೆ 5ಕ್ಕೆ ಸಂತ ಮಂಡಳಿಯವರಿಂದ ಭಜನೆ, ಕಾಕಡಾರತಿ, 11 ರಿಂದ ನಾಮದೇವ ಮಹಾರಾಜರ ಪಲ್ಲಕ್ಕಿ ಉತ್ಸವ, ತೀರ್ಥ ಪ್ರಸಾದ ವ್ಯವಸ್ಥೆ ಮಾಡ ಲಾಗಿದೆ ಎಂದು ಕಾರ್ಯದರ್ಶಿ ಮನೋಹರ್ ವಿ.ಬೊಂಗಾಳೆ ತಿಳಿಸಿದ್ದಾರೆ.

# ಚರ್ಮ ಕುಶಲಕರ್ಮಿಗಳ ಪರಿಹಾರ ಧನಕ್ಕೆ ಅರ್ಜಿ

ದಾವಣಗೆರೆ, ಆ.4- ಚರ್ಮ ಕುಶ ಲಕರ್ಮಿಗಳು ಕೋವಿಡ್-19 ಲಾಕ್‌ಡೌ ನ್ ಪರಿಹಾರ ಧನ ಪಡೆಯಲು ಅರ್ಜಿ ಸಲ್ಲಿಸುವ ದಿನಾಂಕವನ್ನು ಇದೇ ದಿನಾಂಕ 31 ರವರೆಗೆ ವಿಸ್ತರಿಸಲಾಗಿದೆ.

ಲಾಕ್‌ಡೌನ್‌ನಿಂದಾಗಿ ಆರ್ಥಿಕ ತೊಂದರೆ ಎದುರಿಸಿದ ಚರ್ಮ ಕುಶಲಕರ್ಮಿಗಳಾದ ಪಾದರಕ್ಷೆಗಳ ತಯಾರಿಕೆ, ದುರಸ್ತಿ ಹಾಗೂ ಚರ್ಮ ಹದ ಮಾಡುವ ಕಾಯಕದಲ್ಲಿ ತೊಡಗಿರುವ ಚಮ್ಮಾರರು, ಚರ್ಮಕುಶಲ ಕರ್ಮಿಗಳಿಗೆ ಸರ್ಕಾರ ನೀಡುವ ರೂ.2000 ಪರಿಹಾರ ಪಡೆಯಲು ಅರ್ಹರು ಆನ್‌ಲೈನ್ ಮೂಲಕ ಸೇವಾ ಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಆಗಸ್ಟ್ 31 ರವರೆಗೆ ವಿಸ್ತರಿಸಲಾಗಿದೆ.

ಪರಿಹಾರ ಧನವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು ಎಂದು ಡಾ.ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಜಿಲ್ಲಾ ಸಂಯೋಜಕ ಜಯರಾಮಯ್ಯ ತಿಳಿಸಿದ್ದಾರೆ.

# ಕ್ರೀಡಾಪಟುಗಳಿಗೆ ಪ್ರಶಸ್ತಿ : ಅರ್ಜಿ ಆಹ್ವಾನ

ದಾವಣಗೆರೆ, ಆ.4- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಪದಕ ಪಡೆದ ಕರ್ನಾಟಕದ ಕ್ರೀಡಾಪಟುಗಳು ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ, ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ರಾಷ್ಟ್ರಕ್ಕೆ ಕೀರ್ತಿ ತಂದ ರಾಜ್ಯದ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ವತಿಯಿಂದ ನಗದು ಪುರಸ್ಕಾರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಒಲಿಂಪಿಕ್ ಗೇಮ್ಸ್, ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್, ವರ್ಲ್ಡ್ ಕಪ್/ ಚಾಂಪಿಯನ್ ಷಿಪ್ (ಭಾರತ ಸರ್ಕಾರದಿಂದ ಅಂಗೀಕೃತವಾದ ಭಾರತ ತಂಡದ ಭಾಗವಾಗಿ ಪ್ರತಿನಿಧಿಸಿರಬೇಕು), ನ್ಯಾಷನಲ್ ಗೇಮ್ಸ್ (ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನಡೆಯುವ ಕ್ರೀಡೆಗಳು), ನ್ಯಾಷನಲ್ ಚಾಂಪಿಯನ್‌ಶಿಪ್ (ಒಲಿಂಪಿಕ್ ಕ್ರೀಡೆಗಳಿಗೆ ಮಾತ್ರ), ಜ್ಯೂನಿಯರ್ ನ್ಯಾಷನಲ್ (ಒಲಿಂಪಿಕ್ ಕ್ರೀಡೆಗಳಿಗೆ ಮಾತ್ರ), ಸಬ್ ಜ್ಯೂನಿಯರ್ ನ್ಯಾಷನಲ್ (ಒಲಿಂಪಿಕ್ ಕ್ರೀಡೆಗಳಿಗೆ ಮಾತ್ರ) ಕ್ರೀಡಾಕೂಟದಲ್ಲಿ ಪದಕ ಪಡೆದಿರುವ ಕ್ರೀಡಾಪಟುಗಳು ಅರ್ಜಿ ಸಲ್ಲಿಸಬಹುದು.

ಅರ್ಹ ಕ್ರೀಡಾಪಟುಗಳು ಇದೇ ದಿನಾಂಕ 28 ರೊಳಗಾಗಿ ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ದಾವಣಗೆರೆ ಇಲ್ಲಿ ಭರ್ತಿ ಮಾಡಿದ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 08192-237480 ಕ್ಕೆ ಸಂಪರ್ಕಿಸಬಹುದು.

# ಮಾಲೀಕನ ಕಣ್ಣೆದುರೇ ಸಾಕು ಹಂದಿಗಳ ಕಳ್ಳತನ

ದಾವಣಗೆರೆ, ಆ.4- ತಿಪ್ಪೆಯಲ್ಲಿ ಮಲಗಿದ್ದ ಸುಮಾರು 20 ರಿಂದ 25 ಸಾಕು ಹಂದಿಗಳನ್ನು ಮಧ್ಯರಾತ್ರಿ ವೇಳೆ ಕಳವು ಮಾಡಿ ವಾಹನದಲ್ಲಿ ಹೊತ್ತೊಯ್ದಿರುವ ಘಟನೆ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೊನ್ನೆ ನಡೆದಿದೆ. ನಿಟ್ಟುವಳ್ಳಿ ರಾಜೇಶ್ವರಿ ಬಡಾವಣೆ 1ನೇ ಕ್ರಾಸ್ ಲೆನಿನ್ ನಗರದ ಎನ್. ಚಂದ್ರು ಎಂಬುವರಿಗೆ ಸೇರಿದ 20 ರಿಂದ 25 ಸಾಕು ಹಂದಿಗಳನ್ನು ಸಿದ್ದಗಂಗಾ ಶಾಲೆ ಹಿಂಭಾಗದ ತಿಪ್ಪೆಯಲ್ಲಿ ಮಲಗಿದ್ದಾಗ ಕಳವು ಮಾಡಲಾಗಿದೆ.

ಕಳ್ಳರು ಒಂದು ಬಿಳಿ ಬಣ್ಣದ ಬೋಲೆರೋ ಪಿಕ್ ಅಪ್ ವಾಹನವನ್ನು ನಿಲ್ಲಿಸಿಕೊಂಡು ತಿಪ್ಪೆಯಲ್ಲಿ ಮಲಗಿರುವ ಹಂದಿಗಳನ್ನು ಹಿಡಿದು ವಾಹನಕ್ಕೆ ತುಂಬಿಸುತ್ತಿದ್ದು ಕಂಡುಬಂತು. ಆಗ ನಾನು ಜೋರಾಗಿ ಕೂಗಿಕೊಂಡಾಗ ಕಳ್ಳರು ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋದರು ಎಂದು ಹಂದಿ ಮಾಲೀಕ ಚಂದ್ರು ದೂರಿನಲ್ಲಿ ವಿವರಿಸಿದ್ದಾರೆ.

# ಕಾನೂನು ಪದವೀಧರರ ಶಿಷ್ಯ ವೇತನ

ದಾವಣಗೆರೆ, ಆ.4- ಹಿಂದುಳಿದ ವರ್ಗಗಳಿಗೆ ಸೇರಿದ ಕಾನೂನು ಪದವೀಧರರಿಗೆ ಈ ಸಾಲಿನ ಆಡಳಿತ ನ್ಯಾಯಾಧೀಕರಣದಲ್ಲಿ ತರಬೇತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಅರ್ಹ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 46, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ರಸ್ತೆ, ದಾವಣಗೆರೆ-577006, ಇಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಆಗಸ್ಟ್ 21 ರೊಳಗೆ ಕಚೇರಿಗೆ ಸಲ್ಲಿಸಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

# ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಹ

ದಾವಣಗೆರೆ, ಆ.4 - ಯುವ ಸಬಲೀಕರಣ - ಕ್ರೀಡಾ ಇಲಾಖೆಯು 'ಕರ್ನಾಟಕ ಕ್ರೀಡಾ ಪೋಷಕ' ಪ್ರಶಸ್ತಿಗೆ ಪೋಷಕರಿಂದ ಪ್ರಸ್ತಾವನೆಯನ್ನು ಆಹ್ವಾನಿಸಲಾಗಿದೆ. ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿ ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಾವಣಗೆರೆ ಕಛೇರಿಯಲ್ಲಿ ಪಡೆಯಬಹುದಾಗಿದೆ. ಅರ್ಜಿ ಸಲ್ಲಿಸಲು ಆ.28 ಕೊನೆಯ ದಿನ. ವಿವರಕ್ಕೆ ಸಂಪರ್ಕಿಸಿ 08192-237480.

# 2023ಕ್ಕೆ ರಾಮ ಮಂದಿರದಲ್ಲಿ ಪೂಜೆ

ನವದೆಹಲಿ, ಆ. 4 – ರಾಮ ಮಂದಿರ ನಿರ್ಮಾಣ ಕಾರ್ಯ ನಿರೀಕ್ಷೆಯಂತೆ ಮುಂದುವರೆದರೆ, 2023ರಲ್ಲಿ ಭಕ್ತರು ದೇವಾಲಯದಲ್ಲಿ ಪೂಜೆ ಸಲ್ಲಿಸಲು ಸಾಧ್ಯವಾಗಲಿದೆ ಎಂದು ರಾಮ ದೇವಾಲಯ ಟ್ರಸ್ಟ್ ಮೂಲಗಳು ತಿಳಿಸಿವೆ. ಆದರೆ, ಇಡೀ ದೇವಾಲಯ ಸಂಕೀರ್ಣದ ನಿರ್ಮಾಣ 2025ರ ವೇಳೆಗೆ ಪೂರ್ಣವಾಗಲಿದೆ ಎಂದು ಮೂಲಗಳು ತಿಳಿಸಿವೆ.

# ಏಕಲವ್ಯ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಆ.4- ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕ್ರೀಡೆಯಲ್ಲಿ ಅಸಾ ಧಾರಣ ಪ್ರತಿಭೆ ತೋರಿರುವ ಕ್ರೀಡಾಪಟು ಗಳಿಂದ ಏಕಲವ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ಏಕಲವ್ಯ ಪ್ರಶಸ್ತಿಗಾಗಿ ಅರ್ಜಿ ನಮೂನೆಯನ್ನು ಸಹಾಯಕ ನಿರ್ದೇಶಕರ ಕಾರ್ಯಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ದಾವಣಗೆರೆ ಕಚೇರಿಯಲ್ಲಿ ಪಡೆಯಬಹುದು. ಅರ್ಜಿ ಸಲ್ಲಿಸಲು ಇದೇ ದಿನಾಂಕ 23 ಕೊನೆಯ ದಿನವಾಗಿದೆ. ವಿವರಕ್ಕೆ ಸಂಪರ್ಕಿಸಿ 08192-237480.

# ದಿನಗಳಲ್ಲಿ ಖಾತೆ ಹಂಚಿಕೆ

(1ನೇ ಪುಟದಿಂದ) ಅವಕಾಶ ಬಂದಾಗ ಕಲ್ಪಿಸುತ್ತೇವೆ ಎಂದು ಹೇಳಿದರು.

ಹಿಂದಿನ ಸಂಪುಟದಲ್ಲಿದ್ದ ಕೆಲವರನ್ನು ಕೈ ಬಿಟ್ಟಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಬೊಮ್ಮಾಯಿ, ಹಿರಿಯರು ಸಂಘಟನೆಯ ಅನುಭವ ಇದ್ದವರಿಗೆ ಪಕ್ಷದ ಸಂಘಟನೆಗೆ ಬಳಸಿಕೊಳ್ಳುತ್ತೇವೆ ಎಂದು ವರಿಷ್ಠರು ಹೇಳಿದ್ದಾರೆ ಎಂದರು. 13 ಜಿಲ್ಲೆಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲದಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸಂಪುಟದಲ್ಲಿ ಇರುವ ಸಚಿವರಿಗೆ ಆ 13 ಜಿಲ್ಲೆಗಳ ಪ್ರಾತಿನಿಧಿತ್ವ ಕೊಡಲಾಗುವುದು ಎಂದರು.

# ಕೊರೊನಾ 10 ಪಾಸಿಟಿವ್, 21 ಗುಣಮುಖ

ದಾವಣಗೆರೆ, ಆ.4- ಜಿಲ್ಲೆಯಲ್ಲಿ ಗುರುವಾರ 10 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, 21 ಗುಣಮುಖರಾದ ಬಗ್ಗೆ ಜಿಲ್ಲಾಧಿಕಾರಿ ಗಳ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ದಾವಣಗೆರೆ ತಾಲ್ಲೂಕಿನಲ್ಲಿ 4, ಹರಿಹರ 2, ಚನ್ನಗಿರಿ 1, ಹೊನ್ನಾಳಿ 2 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲಿ ಸೋಂಕು ಕಾಣಿಸಿಕೊಂಡಿದೆ. 249 ಸಕ್ರಿಯ ಪ್ರಕರಣಗಳಿವೆ.


# ಕೃಷಿ ಉತ್ಪನ್ನಗಳ ಪ್ರಮಾಣೀಕರಣ ಪ್ರೋತ್ಸಾಹಕ್ಕೆ ಅರ್ಜಿ

ದಾವಣಗೆರೆ, ಆ.4- ಜಿಲ್ಲೆಯಲ್ಲಿ ಈಗಾಗಲೇ ಸಾವಯವ ಪ್ರಮಾಣೀಕರಣ ಪ್ರಕ್ರಿಯೆ ಆರಂಭಗೊಂಡಿದ್ದು, ಇನ್ನೂ ಹೆಚ್ಚಿನ ವಿಸ್ತೀರ್ಣ ಹಾಗೂ ರೈತರನ್ನು ಪ್ರಮಾಣೀಕರಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಅರ್ಹ ಸಾವಯವ ಕೃಷಿಕರಿಂದ ಪ್ರಮಾಣೀಕರಣಕ್ಕಾಗಿ ಅರ್ಜಿ ಆಹ್ವಾನಿಸಿದೆ.

ಆಸಕ್ತ ರೈತರ ಗುಂಪುಗಳು ಹಾಗೂ ರೈತ ಬಾಂಧವರು ಸಮೀಪದ ರೈತ ಸಂಪರ್ಕ ಕೇಂದ್ರ, ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು. ಗುಂಪು ಹಾಗೂ ವೈಯಕ್ತಿಕ ಅರ್ಜಿಗಳನ್ನು ಸಲ್ಲಿಸಲು ಇದೇ ದಿನಾಂಕ 16 ಕೊನೆಯ ದಿನವಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.


## ಜನ್ಮ ದಿನದ ಶುಭಾಶಯಗಳು



ಇಂದು ತಮ್ಮ ಸಾರ್ಥಕ 49 ವರ್ಷಗಳನ್ನು ಪೂರೈಸಿ, 50ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದ ಸಂಘದ ಸಂಚಾಲಕರೂ, ನಮ್ಮೆಲ್ಲರ ಆತ್ಮೀಯರೂ ಆದ

**ಶ್ರೀ ಬೇತೂರು ರಾಜೇಶ್**

ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.

ಶ್ರೀಯುತರಿಗೆ ಭಗವಂತನು ಆರೋಗ್ಯ, ಆಯುಷ್ಯ, ಸುಖ-ಶಾಂತಿ, ನೆಮ್ಮದಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,

✦ ರಮೇಶ್ ಶಿವನಳ್ಳಿ, ಮಹಾನಗರ ಪಾಲಿಕೆ ಮಾಜಿ ಸದಸ್ಯರು
✦ ಬಿ.ಎಸ್. ರಮೇಶ್, ವರ್ತಕರು ✦ ಅರುಣಕುಮಾರ್ ಶಾಮನೂರು, ವರ್ತಕರು
✦ ಸುಜಿತ್‌ಕುಮಾರ್ ಬೆಳ್ಳೂಡಿ, ವಿಮಾ ಸಲಹೆಗಾರರು
✦ ಹೆಚ್.ಜಿ. ಬಸವರಾಜ್ (ಪುಟ್ಟು) ✦ ಅಶೋಕ್ ಹೆಚ್.ಪಿ. ಮೃತ್ಯುಂಜಯ ಫಾರ್ಮಾ
✦ ವೀರೇಶ್ ಸ್ವಾಮಿ ✦ ಶ್ರೀಧರ್ ✦ ವೇಣು ಕೋಟೆ ✦ ಶ್ರೀನಿವಾಸ್ ರಾಯ್ಕರ್
✦ ಡಿ.ಹೆಚ್. ಆಂಜನೇಯ ಶಿಲ್ಪಿ ✦ ಮುರುಗೇಶ್ ಬಿ.ಪಿ.
✦ ನಾಗರಾಜ್ ಜಿ.ಎನ್. ಉಮಾಶಂಕರ್ ಇಂಡಸ್ಟ್ರೀಸ್

ವಾಯು ವಿಹಾರ ಬಳಗ, ಬಾಪೂಜಿ ಎಂಬಿಎ ಕಾಲೇಜ್, ದಾವಣಗೆರೆ.


# ವಸತಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಆ.4- ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಇಂದಿರಾಗಾಂಧಿ, ಡಾ. ಬಿ.ಆರ್. ಅಂಬೇಡ್ಕರ್, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪ್ರತಿಭಾನ್ವಿತ ವಸತಿ ಶಾಲೆ, ಮಾಯಕೊಂಡ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಇದೇ ದಿನಾಂಕ 10 ರವರೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಪ್ರವೇಶ ಪರೀಕ್ಷೆ ಸೆಪ್ಟೆಂಬರ್ 16 ಗುರುವಾರ ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿದೆ. ಪ್ರವೇಶ ಪತ್ರಗಳನ್ನು ಸೆಪ್ಟೆಂಬರ್ 4 ರಿಂದ ಸೆಪ್ಟೆಂಬರ್ 15 ರವರೆಗೆ ವೆಬ್‌ಸೈಟ್: http://kea.kar.nic.in ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಮತ್ತು ವಸತಿ ಶಿಕ್ಷಣ ಸಂಸ್ಥೆಗಳಿಗೆ ವೆಬ್‌ಸೈಟ್ http://kreis.kar.nic.in ನಿಂದ ಪಡೆಯಬಹುದೆಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

# ವಿಜಯೇಂದ್ರಗೆ ಸಿಗದ ಅವಕಾಶ

(1ನೇ ಪುಟದಿಂದ) ಉಪಮುಖ್ಯಮಂತ್ರಿ ಮಾಡಲು ಯಡಿಯೂರಪ್ಪ ಇನ್ನಿಲ್ಲದ ಕಸರತ್ತು ನಡೆಸಿದ್ದರು. ಇವರಿಗೆ ಮಂತ್ರಿಮಂಡಲದಲ್ಲಿ ಅವಕಾಶ ನೀಡಲೇಬೇಕೆಂದು ಬೊಮ್ಮಾಯಿ ಅವರಿಗೆ ತಾಕೀತು ಮಾಡಿದ್ದರು, ಅಷ್ಟೇ ಅಲ್ಲ ವರಿಷ್ಠರ ಮುಂದೆಯೂ ತಮ್ಮ ಬೇಡಿಕೆ ಇಟ್ಟಿದ್ದರು.

ಇದೇ ವಿಚಾರಕ್ಕಾಗಿ ಬೊಮ್ಮಾಯಿ ವರಿಷ್ಠರೊಟ್ಟಿಗೆ ಸತತ ಮೂರು ದಿನಗಳ ಕಾಲ ಹೋರಾಟ ನಡೆಸಿದರಾದರೂ ಸಫಲವಾಗಿರಲಿಲ್ಲ.

ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ. ಎಲ್. ಸಂತೋಷ್, ಯಾರ ಒತ್ತಡ ಎಷ್ಟೇ ಬಂದರೂ ಮಣಿಯದೆ ತಮ್ಮ ನಿರ್ಧಾರದಿಂದ ಹಿಂದೆ ಸರಿಯದ ಕಾರಣದಿಂದ ವಿಜಯೇಂದ್ರ ಅವರಿಗೆ ಅವಕಾಶ ದೊರೆಯಲಿಲ್ಲ.

ಕೊನೆ ಗಳಿಗೆಯಲ್ಲಾದರೂ ಪಟ್ಟಿಯಲ್ಲಿ ಇವರ ಹೆಸರನ್ನು ಸೇರಿಸಿ ಎಂದು ಮನವಿ ಮಾಡಿಕೊಂಡು ಮುಖ್ಯಮಂತ್ರಿ ಬೆಂಗಳೂರಿಗೆ ಹಿಂತಿರುಗಿದರು. ಆದರೆ, ಬೆಳಿಗ್ಗೆ ಬಂದ ಪಟ್ಟಿಯಲ್ಲಿ ವಿಜಯೇಂದ್ರ ಅವರ ಹೆಸರೂ ಇರಲಿಲ್ಲ, ಉಪಮುಖ್ಯಮಂತ್ರಿ ಸ್ಥಾನದ ಪ್ರಸ್ತಾಪವೂ ಇರಲಿಲ್ಲ.

ವರಿಷ್ಠರ ನಿರ್ಧಾರದಿಂದ ಕೋಪೋದ್ರಿಕ್ತರಾದ ಯಡಿಯೂರಪ್ಪ, ತಮ್ಮ ಮುಂದಿನ ರಾಜಕೀಯ ನಿಲುವುಗಳ ಬಗ್ಗೆ ದೆಹಲಿ ನಾಯಕರಿಗೆ ಎಚ್ಚರಿಕೆ ನೀಡಿದರು ಎಂದು ಮೂಲಗಳು ತಿಳಿಸಿವೆ. ನಂತರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರೇ ಯಡಿಯೂರಪ್ಪ ಅವರನ್ನು ಸಂಪರ್ಕಿಸಿ ಮಾತನಾಡಿಸಿ ಸಮಾಧಾನ ಪಡಿಸಿದರು.

ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸಹಾ ವಿಜಯೇಂದ್ರ ಅವರೊಂದಿಗೆ ನಗರದಲ್ಲಿ ಮಾತನಾಡಿ ಸಮಾಧಾನ ಪಡಿಸಿದರು. ಈ ಬೆಳವಣಿಗೆಯಿಂದ ತಮ್ಮ ಆಪ್ತರನ್ನು ಕೊನೆ ಗಳಿಗೆಯಲ್ಲಿ ಮಂತ್ರಿಮಂಡಲಕ್ಕೆ ಸೇರಿಸುವಲ್ಲಿ ಯಡಿಯೂರಪ್ಪ ಯಶಸ್ವಿಯಾದರು ಎಂದು ಮೂಲಗಳು ಹೇಳಿವೆ.

## ಮಾನ್ಯ ಗೌರವಾನ್ವಿತ 1ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ (ಇಟಿನರರಿ ಹಿರಿಯ ಸಿವಿಲ್ ನ್ಯಾಯಾಲಯ ಜಗಳೂರು)

**ಜಿ ಅಂಡ್ ಡಬ್ಲ್ಯೂ ಸಿ ಸಂಖ್ಯೆ 8/2021**

ಅರ್ಜಿದಾರರು : 1)ಗೌಸ್ ಪಾಷ ಎ.ಹೆಚ್. ಬಿನ್ ಲೇ॥ ಹುಸೈನ್ ವಯಸ್ಸು, ಸುಮಾರು 50 ವರ್ಷ, ವಾಸ : ಇಂದಿರಾ ಬಡಾವಣೆ, ತಿರುಕಪ್ಪ ಫ್ಲೋರ್ ಮಿಲ್ ಹಿಂಭಾಗ, ಜಗಳೂರು ಟೌನ್, ದಾವಣಗೆರೆ ಜಿಲ್ಲೆ. 2) ಹಸೀನಾ ಬಾನು ಬಿನ್ ಲೇ॥ ಹುಸೈನ್, ವಯಸ್ಸು ಸುಮಾರು 35 ವರ್ಷ, ಸಂರಕ್ಷಕರಾಗಿ ಅವರ ಸಹೋದರ ಸಮೀವುಲ್ಲಾ ಬಿನ್ ಲೇ॥ ಹುಸೈನ್ ವಯಸ್ಸು 50 ವರ್ಷ, ಇಬ್ಬರು ವಾಸ : ಇಂದಿರಾ, ಬಡಾವಣೆ, ಜಗಳೂರು ಟೌನ್, ದಾವಣಗೆರೆ ಜಿಲ್ಲೆ. ವಿರುದ್ಧ/- ಎದುರುದಾರರು:ಇಲ್ಲ.

**ಸಾರ್ವಜನಿಕ ಪ್ರಕಟಣೆ**

ಈ ಮೇಲ್ಕಂಡ ಅರ್ಜಿಯನ್ನು ಲೇ॥ ಹುಸೈನ್ ಇವರು ಬೆಸ್ಕಾಂ ನೌಕರರಾಗಿ ನಿವೃತ್ತಿ ಹೊಂದಿದ್ದು ಅವರಿಗೆ ಸಂಬಂಧಪಟ್ಟಂತೆ ಸದರಿ ಇಲಾಖೆಯಿಂದ ಬರುವಂತಹ ನಿವೃತ್ತಿ ಸೌಲಭ್ಯಗಳನ್ನು ಪಡೆಯಲು 2ನೇ ಅರ್ಜಿದಾರಳು ಅರ್ಹಳಿದ್ದು, 2ನೇ ಅರ್ಜಿದಾರರಾದ ಹಸೀನಾ ಬಾನು ಬಿನ್ ಲೇ॥ ಹುಸೈನ್ ಇವರು ಮಾನಸಿಕವಾಗಿ ಅಸ್ವಸ್ಥರಾಗಿ ರುವ ಕಾರಣ, ಅವರ ಪರವಾಗಿ ಅವರ ಸಂರಕ್ಷಕರಾಗಿ ಅವರ ಸಹೋದರ ಸಮೀವುಲ್ಲಾ ಬಿನ್ ಲೇ॥ ಹುಸೈನ್ ಇವರನ್ನು ಸಂರಕ್ಷಕರನ್ನಾಗಿ ನೇಮಕ ಮಾಡಿ ಆದೇಶ ಮಾಡಲು ಕೋರಿ, ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಯಾರದೇ ಆಗಲೀ ಯಾವುದೇ ತಂಟೆ ತಕರಾರು ಇದ್ದಲ್ಲಿ ಖುದ್ದಾಗಿ ಆಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ದಿನಾಂಕ : 20.9.2021ರಂದು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಈ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜ ರಾಗಿ ತಮ್ಮ ತಕರಾರು ಇದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ಮೇಲ್ಕಂಡ ಅರ್ಜಿಯನ್ನು ಯಾರದೇ ತಕರಾರು ಇಲ್ಲ ವೆಂದು ಪರಿಗಣಿಸಿ ಅರ್ಜಿಯ ಅರ್ಹತೆಯ ಆಧಾರದ ಮೇಲೆ ತೀರ್ಮಾನ ಮಾಡಲಾಗು ವುದು. ನ್ಯಾಯಾಲಯದ ಮೊಹರು ಹಾಗೂ ನನ್ನ ಸಹಿ ಯೊಂದಿಗೆ ದಿ: 03.08.2021 ರಂದು ನೀಡಲಾಗಿದೆ.

**(ಎ.ಎಂ. ಹೆಗಡೆ), ಅರ್ಜಿದಾರರ ಪರ ವಕೀಲರು**
**ಸ್ಥಳ : ದಾವಣಗೆರೆ. ದಾವಣಗೆರೆ. ದಿನಾಂಕ 03.08.2021**
**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು, 1ನೇ ಹೆಚ್ಚುವರಿ ಹಿರಿಯ ಸಿವಿಲ್, ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ದಾವಣಗೆರೆ.**

# ಪ್ಯಾಸೆಂಜರ್ ರೈಲುಗಳ ಸಂಚಾರ ಆರಂಭಕ್ಕೆ ಶಾಸ್ತ್ರಿ ಒತ್ತಾಯ

ದಾವಣಗೆರೆ, ಆ.4-ಸಾರ್ವಜನಿಕರ ಅನುಕೂಲಕ್ಕಾಗಿ ಹುಬ್ಬಳ್ಳಿ-ಅರಸೀಕೆರೆ, ಹುಬ್ಬಳ್ಳಿ-ಬೆಂಗಳೂರು ರಾತ್ರಿ ಪ್ಯಾಸೆಂಜರ್, ಹುಬ್ಬಳ್ಳಿ-ಬೆಂಗಳೂರು ಮಧ್ಯಾಹ್ನ ಪ್ಯಾಸೆಂಜರ್ ಹಾಗೂ ಹರಿಹರ-ಬೆಂಗಳೂರು ಇಂಟರ್‌ಸಿಟಿ ರೈಲುಗಳ ಸಂಚಾರವನ್ನು ಆರಂಭಿಸುವಂತೆ ನೈರುತ್ಯ ರೈಲ್ವೆ ವಲಯದ ಜನರಲ್ ಮ್ಯಾನೇಜರ್ ಹಾಗೂ ಕೇಂದ್ರ ರೈಲ್ವೆ ಸಚಿವರಲ್ಲಿ ನೈರುತ್ಯ ರೈಲ್ವೆ ವಲಯ ಪ್ರಯಾಣಿಕರ ಕುಂದು-ಕೊರತೆ ನಿವಾರಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಂ.ಎಸ್.ಕೆ. ಶಾಸ್ತ್ರಿ ಮನವಿ ಮಾಡಿದ್ದಾರೆ.

# ವ್ಯಾಪಾರಿಯ ಮನೆಗೆ ಕನ್ನ

ದಾವಣಗೆರೆ, ಆ.4- ಪ್ರವಾಸಕ್ಕೆಂದು ತೆರಳಿದ್ದ ಫರ್ನಿಚರ್ ವ್ಯಾಪಾರಿ ಪಿ. ಪವನ್‌ಕುಮಾರ್ ಅವರ ಮನೆಗೆ ಕನ್ನ ಹಾಕಿರುವ ಕಳ್ಳರು, 3.29 ಲಕ್ಷ ರೂ. ಮೌಲ್ಯದ ಚಿನ್ನಾಭರಣ, 1.45 ಲಕ್ಷ ರೂ. ನಗದು ದೋಚಿರುವ ಘಟನೆ ಇಲ್ಲಿನ ಕೆಟಿಜೆ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಭೂಮಿಕಾ ನಗರ 2 ನೇ ಕ್ರಾಸ್ ನಲ್ಲಿ ಮೊನ್ನೆ ನಡೆದಿದೆ.

# ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

ದಾವಣಗೆರೆ, ಆ.4- ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಈ ಸಾಲಿನ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ಯೋಜನೆಯಡಿ ಬಿ.ಇಡಿ ಮತ್ತು ಡಿ.ಇಡಿ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ ಕಲಿಕಾ ಮತ್ತು ಬೋಧನಾ ಸಾಮಗ್ರಿಗಳನ್ನು ಖರೀದಿಸಲು ಆರ್ಥಿಕ ಸಹಾಯ ಮಾಡುವ ಹಿತದೃಷ್ಟಿಯಿಂದ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ಇಲಾಖಾ ವೆಬ್‌ಸೈಟ್: https://dom.karnataka.gov.in ನಲ್ಲಿ ಪಡೆಯಬಹುದು. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-250022.

# ಈ ಸರ್ಕಾರದಲ್ಲಿಯೂ ಸಚಿವ ಸ್ಥಾನ ಇಲ್ಲದೆ ಅನಾಥವಾದ ಜಿಲ್ಲೆ

ದಾವಣಗೆರೆ, ಆ.4- ರಾಜ್ಯದ ಮಧ್ಯ ಕರ್ನಾಟಕದ ಜಿಲ್ಲೆ ಎಂದೇ ಹೆಸರಾಗಿರುವ ದಾವಣಗೆರೆ ಜಿಲ್ಲೆಗೆ ಈ ಬಾರಿಯೂ ಸಹ ಸಚಿವ ಸ್ಥಾನ ಇಲ್ಲದೆ ಬೇರೆ ಜಿಲ್ಲೆಯ ಸಚಿವರುಗಳ ಆಸರೆಯಲ್ಲಿ ಜೀವನ ಸಾಗಿಸುವ ಸ್ಥಿತಿ ಮುಂದುವರೆದಿರುವ ಬಗ್ಗೆ ಕಾಂಗ್ರೆಸ್ ಸಾಮಾಜಿಕ ಜಾಲತಾಣದ ರಾಜ್ಯ ಸದಸ್ಯರು ಕೆ.ಎಲ್.ಹರೀಶ್ ಬಸಾಪುರ ಅವರು ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ಪೈಕಿ ಐದು ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರು ಇದ್ದರೂ, ಲೋಕಸಭೆಗೆ ಸತತ ನಾಲ್ಕು ಬಾರಿ ಇದೇ ಪಕ್ಷದಿಂದ ಜಿಲ್ಲೆಯ ಜನರು ಆರಿಸಿ ಕಳಿಸುತ್ತಿದ್ದರೂ, ವಿಧಾನ ಪರಿಷತ್, ನಗರ ಪಾಲಿಕೆ, ಜಿಲ್ಲಾ ಪಂಚಾಯತ್ ಎಂದು ಬಂದ ಬಂದ ಚುನಾವಣೆಗಳಲ್ಲಿ ಅಭಿಮಾನದಿಂದ ಜಿಲ್ಲೆಯ ಜನ ಬಿಜೆಪಿ ಪಕ್ಷಕ್ಕೆ ಮತ ನೀಡುತ್ತಿದ್ದರೂ ಸಹ ಬಿಜೆಪಿಯ ವರಿಷ್ಠರು ಜಿಲ್ಲೆಯ ಶಾಸಕರಿಗೆ ಸಚಿವ ಸ್ಥಾನ ನೀಡದೆ ಜಿಲ್ಲೆಯ ಜನತೆಗೆ ಅವಮಾನಿಸಿದ್ದಾರೆ ಎಂದರೆ ತಪ್ಪಾಗಲಾರದು.


ಜಾತಿ ಸಮೀಕರಣ ವ್ಯವಸ್ಥೆಯಿಂದ ಎಸ್.ಎ. ರವೀಂದ್ರನಾಥ್, ಮಾಡಾಳ್ ವಿರೂಪಾಕ್ಷಪ್ಪ, ಎಸ್.ವಿ.ರಾಮಚಂದ್ರಪ್ಪ ಅವರಿಗೆ ಸಚಿವ ಸ್ಥಾನ ತಪ್ಪಿದ್ದರೆ, ಪ್ರಥಮ ಬಾರಿ ಎಂದು ಮಾಯಕೊಂಡದ ಲಿಂಗಣ್ಣನವರಿಗೆ ಸಚಿವ ಸ್ಥಾನ ತಪ್ಪಿತು ಎನ್ನಲಾಗುತ್ತಿದೆ.


ಆದರೆ, ಸಚಿವರಾಗುವ ಎಲ್ಲಾ ರೀತಿಯ ಅವಕಾಶಗಳಿದ್ದರೂ ಎಂ.ಪಿ. ರೇಣುಕಾಚಾರ್ಯ ಅವರ ವೈಯಕ್ತಿಕ ತಪ್ಪಿನಿಂದ ಜಿಲ್ಲೆಗೆ ಸಚಿವ ಸ್ಥಾನ ತಪ್ಪಿದೆ ಎನ್ನಲಾಗುತ್ತಿದೆ. ಅಂತಿಮವಾಗಿ ಜಿಲ್ಲೆಗೆ ಸಚಿವ ಸ್ಥಾನ ತಪ್ಪಿದ್ದಂತೂ ಸತ್ಯ.

ಪಕ್ಷದ ಶಾಸಕರು ಪಕ್ಷದ ಅಭಿಮಾನದಿಂದ ಅಥವಾ ನಾಯಕರ ಭಯದಿಂದ ತಮಗೆ ಆದ ಅವಮಾನವನ್ನು ಸಹಿಸಿಕೊಳ್ಳುತ್ತಾರೆ ಎಂದುಕೊಳ್ಳೋಣ.

ಆದರೆ, ಇಷ್ಟೆಲ್ಲಾ ಸ್ಥಾನ ಗೆಲ್ಲಲು ಮಹತ್ತರ ಪಾತ್ರವಹಿಸಿದ ಜಿಲ್ಲೆಯನ್ನೇ ಮರೆತಾಗ ಜಿಲ್ಲೆಯ ಜನರು ಇಂತಹ ಅವಮಾನವನ್ನು ಸಹಿಸಿಕೊಳ್ಳಲು ಸಾಧ್ಯವೇ ? ಎಂದು ಅವರು ಪ್ರಶ್ನಿಸಿದ್ದಾರೆ.



## ಜನ್ಮ ದಿನದ ಶುಭಾಶಯಗಳು





ದಿನಾಂಕ 05.08.2021ರಂದು ತಮ್ಮ 50ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನ ಸಂಘದ ಸಂಚಾಲಕರೂ, ನಮ್ಮೆಲ್ಲರ ಆತ್ಮೀಯರೂ ಆದ

**ಶ್ರೀ ಬೇತೂರು ರಾಜೇಶ್**




ಅವರಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳು.


ಶ್ರೀಯುತರಿಗೆ ಭಗವಂತನು ಆರೋಗ್ಯ, ಆಯುಷ್ಯ, ಸುಖ-ಶಾಂತಿ, ನೆಮ್ಮದಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುವ,





✦ ಅಥಣಿ ವೀರಣ್ಣನವರು, ಕೈಗಾರಿಕೋದ್ಯಮಿಗಳು
✦ ದೇವರಮನೆ ಜಯರಾಜ್, ಅಡ್ವೊಕೇಟ್, ಬೆಂಗಳೂರು ✦ ಬೇತೂರು ಪ್ರದೀಪ್, ಹೈದ್ರಾಬಾದ್
✦ ಬೇತೂರು ಜಗದೀಶ್ ✦ ದೇವರಮನೆ ವಿಜಯಕುಮಾರ್ ✦ ಬೇತೂರು ಸುರೇಶ್
✦ ಬೇತೂರು ಮೋಹನ್, ಬೆಂಗಳೂರು ✦ ಬೇತೂರು ಕಿರಣ್ ✦ ಬೇತೂರು ಸಂಪತ್
✦ ಆರ್.ಜಿ. ಧನ್ಯಕುಮಾರ್ ✦ ರವಿಶಂಕರ್, ಬೆಣ್ಣೆದೋಸೆ ಹೋಟೆಲ್ ✦ ಐನಳ್ಳಿ ಪುಟ್ಟಪ್ಪ
✦ ಕಾಶಿಪುರ ಪುಟ್ಟಪ್ಪ ✦ ಬೇತೂರು ಪ್ರಕಾಶ್ ✦ ಬೆಳ್ಳೂಡಿ ವೀರಣ್ಣ

# ಭದ್ರಾ ಬಹುತೇಕ ಭರ್ತಿ ನದಿಗೆ ನೀರು ಸಾಧ್ಯತೆ



**7 ರಂದು ಕಾಡಾ ಅಧ್ಯಕ್ಷರಿಂದ ಭದ್ರೆಗೆ ಬಾಗಿನ**

ಮಲೇಬೆನ್ನೂರು, ಆ.4- ಮಧ್ಯ ಕರ್ನಾಟಕದ ಜೀವನಾಡಿ ಭದ್ರಾ ಜಲಾಶಯ ಸಂಪೂರ್ಣ ತುಂಬುತ್ತಿದ್ದಂತೆ ಹೆಚ್ಚುವರಿ ನೀರನ್ನು ನದಿಗೆ ಹರಿಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

ಬುಧವಾರ ಬೆಳಿಗ್ಗೆ ಮತ್ತಷ್ಟು ಒಳಹರಿವು ಹೆಚ್ಚಾಗಿದ್ದು, ನೀರಿನ ಮಟ್ಟ 184 ಅಡಿ ತಲುಪಿದೆ. 71.535 ಟಿಎಂಸಿ ಸಾಮರ್ಥ್ಯದ ಜಲಾಶಯದಲ್ಲೀಗ 68.188 ಟಿಎಂಸಿ ನೀರು ಸಂಗ್ರಹವಾಗಿದೆ.

ಮಲೆನಾಡಿನಲ್ಲಿ ಮಂಗಳವಾರದಿಂದ ಮತ್ತೆ ಮಳೆ ಆರಂಭವಾಗಿದೆ. ಅಲ್ಲದೇ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ ಎಂದು ಹೇಳಿದೆ. ಹಾಗಾಗಿ ಜಲಾಶಯದ ಹಿತದೃಷ್ಟಿಯಿಂದ ಗರಿಷ್ಠ ಮಟ್ಟ 186 ಅಡಿ ವರೆಗೆ ನೀರು ಸಂಗ್ರಹಿಸದೇ 184 ಅಥವಾ 185 ಅಡಿಗೆ ನೀರು ತಲುಪಿದ ತಕ್ಷಣ ಒಳ ಹರಿವಿನ ಪ್ರಮಾಣ ನೋಡಿಕೊಂಡು ಜಲಾಶಯದ ಕ್ರೆಸ್ಟ್ ಗೇಟ್‌ಗಳ ಮೂಲಕ ಹೆಚ್ಚುವರಿ ನೀರು ನದಿಗೆ ಬಿಡಲಾಗುವುದು.

ಕಳೆದ ವರ್ಷ ಈ ದಿನ ಜಲಾಶಯದಲ್ಲಿ 154 ಅಡಿ 3 ಇಂಚು ನೀರಿತ್ತು. ಕಳೆದ 2 ವರ್ಷಗಳಿಗೆ ಹೋಲಿಸಿದರೆ, ಜುಲೈ ತಿಂಗಳಲ್ಲೇ ಜಲಾಶಯಕ್ಕೆ ಇಷ್ಟೊಂದು ಪ್ರಮಾಣದ ನೀರು ಹರಿದು ಬಂದು ಅಚ್ಚುಕಟ್ಟಿನ ರೈತರ ಬದುಕನ್ನು ಭದ್ರಗೊಳಿಸಿದೆ.

**7 ಕ್ಕೆ ಬಾಗಿನ:** ಭರ್ತಿಯಾಗಿರುವ ಭದ್ರಾ ಜಲಾಶಯಕ್ಕೆ ಇದೇ ದಿನಾಂಕ 7ರ ಶನಿವಾರ ಬೆಳಿಗ್ಗೆ 8 ಗಂಟೆಗೆ ಭದ್ರಾ ಕಾಡಾ ಅಧ್ಯಕ್ಷರಾದ ಪವಿತ್ರ ರಾಮಯ್ಯ ಅವರು ಅಚ್ಚುಕಟ್ಟು ವ್ಯಾಪ್ತಿಯ ಸಂಸದರ, ಶಾಸಕರ ಹಾಗೂ ಕಾಡಾ ಸದಸ್ಯರು, ರೈತ ಮುಖಂಡರ ಸಮ್ಮುಖದಲ್ಲಿ ಬಾಗಿನ ಅರ್ಪಿಸಲಿದ್ದಾರೆ.

# ರೈಲ್ವೆ ಸೀಸನ್ ಟಿಕೆಟ್‌ಗೆ ಚಾಲನೆ

ದಾವಣಗೆರೆ, ಆ. 4 – ಕೊರೊನಾ ಹಿನ್ನೆಲೆಯಲ್ಲಿ ಸ್ಥಗಿತಗೊಳಿಸಲಾಗಿದ್ದ ರೈಲ್ವೆಯ ಸೀಸನ್ ಟಿಕೆಟ್‌ಗೆ ಮತ್ತೆ ಚಾಲನೆ ನೀಡಲಾಗಿದೆ ಎಂದು ರೈಲ್ವೆ ಇಲಾಖೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕರ್ನಾಟಕದಲ್ಲಿ ಲಾಕ್‌ಡೌನ್ ನಿಯಮಾವಳಿಗಳನ್ನು ಸಡಿಲಗೊಳಿಸಿದ ನಂತರ, ರೈಲ್ವೆ ನಿಲ್ದಾಣಗಳಲ್ಲಿ ಕಾಯ್ದಿರಿಸದ ಟಿಕೇಟ್ ಕೌಂಟರ್‌ಗಳಲ್ಲಿ ಮತ್ತು UT-SONMOBILE ಆಪ್‌ನಲ್ಲಿ ಪ್ರಯಾಣಿಕರಿಗೆ ಮಾಸಿಕ ಸೀಸನ್ ಟಿಕೆಟ್‌ಗಳ ಸೌಲಭ್ಯವನ್ನು ಆಗಸ್ಟ್ 3ರಿಂದ ಪುನರಾರಂಭಿಸಲಾಗಿದೆ ಎಂದು ತಿಳಿಸಲಾಗಿದೆ.

ಸೀಸನ್ ಟಿಕೆಟ್ ಸ್ಥಗಿತಗೊಳಿಸಿದ ಕಾರಣದಿಂದ ಹಲವಾರು ದಿನಗಳ ಪ್ರಯಾಣದ ಅವಕಾಶ ಕಳೆದುಕೊಂಡವರಿಗೆ, ಆ ದಿನಗಳಿಗೆ ಅನುಸಾರವಾಗಿ ಕಾಲಮಿತಿಯನ್ನು ವಿಸ್ತರಿಸಲಾಗುವುದು. ಆಗಸ್ಟ್ 9ರಿಂದ ಯು.ಟಿ.ಎಸ್. ಕೌಂಟರ್‌ಗಳಲ್ಲಿ ಉಳಿದ ದಿನಗಳಿಗೆ ತತ್ಸಮಾನವಾಗಿ ಸಕ್ರಿಯಗೊಳಿಸಲಾಗುವುದು ಎಂದು ರೈಲ್ವೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಿಂದಿನಂತೆಯೇ ಸೀಸನ್ ಟಿಕೆಟ್ ಹೊಂದಿರುವವರಿಗೆ, ರೈಲುಗಳಲ್ಲಿ ಮತ್ತು ರೈಲ್ವೇ ಆವರಣದಲ್ಲಿ ಸೂಚಿತ ವ್ಯಕ್ತಿಗತ ದೂರ ಮಾರ್ಗಸೂಚಿಗಳು ಮತ್ತು ನೈರ್ಮಲ್ಯ ನಿಯಮಗಳನ್ನು ಸರಿಯಾಗಿ ಅನುಸರಿಸುವುದರೊಂದಿಗೆ, ಕಾಯ್ದಿರಿಸದ ರೈಲುಗಳು ಮತ್ತು ಕಾಯ್ದಿರಿಸದ ಕೋಚ್‌ಗಳಲ್ಲಿ ಮಾತ್ರ ಪ್ರಯಾಣಿಸಲು ಅನುಮತಿ ನೀಡಲಾಗುವುದು ಎಂದು ತಿಳಿಸಲಾಗಿದೆ.

# ಸಂಪುಟ ವಿಸ್ತರಣೆ ಬೆನ್ನಲ್ಲೇ ಭುಗಿಲೆದ್ದ ಅಸಮಾಧಾನ

ಬೆಂಗಳೂರು, ಆ. 4 – ಸಂಪುಟ ವಿಸ್ತರಣೆಯ ಬೆನ್ನಲ್ಲೇ ಸಚಿವ ಸ್ಥಾನ ವಂಚಿತ ಹಲವರಲ್ಲಿ ಅಸಮಾಧಾನ ಭುಗಿಲೆದ್ದಿದೆ. ಶಾಸಕರು ಹಾಗೂ ಅವರ ಬೆಂಬಲಿಗರು ಬಹಿರಂಗವಾಗಿ ತಮ್ಮ ಅಸಮಾಧಾನ ಹೊರ ಹಾಕಿದ್ದಾರೆ.

ದಾವಣಗೆರೆ ಸೇರಿದಂತೆ 13 ಜಿಲ್ಲೆಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ದೊರೆತಿಲ್ಲ. ಪ್ರಾದೇಶಿಕ ಅಸಮಾನತೆ ಸಹ ಅಸಮಾಧಾನ ಹೆಚ್ಚಾಗಲು ಕಾರಣವಾಗಿದೆ.

ಹಿಂದಿನ ಬಿ.ಎಸ್. ಯಡಿಯೂರಪ್ಪ ಸರ್ಕಾರದಲ್ಲಿ ಸಚಿವರಾಗಿದ್ದ ಕೆಲವರು ಅಧಿಕಾರ ಕಳೆದುಕೊಂಡಿದ್ದಾರೆ. ಇದೂ ಸಹ ಅಸಮಾಧಾನಕ್ಕೆ ಕಾರಣವಾಗಿದೆ ಎನ್ನಲಾಗುತ್ತಿದೆ.

ಸಚಿವ ಸ್ಥಾನ ದೊರೆಯದೇ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಶಾಸಕ ಆರ್. ಶಂಕರ್, ಭರವಸೆ ನೀಡಿದ ನಂತರವೂ ಸಚಿವ ಸ್ಥಾನ ಕೊಟ್ಟಿಲ್ಲ. ಆದರೆ, ಮುಂಬರುವ ದಿನಗಳಲ್ಲಿ ಸಚಿವ ಸ್ಥಾನ ಸಿಗಬಹುದು ಎಂಬ ಆಶಾಭಾವನೆ ವ್ಯಕ್ತಪಡಿಸಿದ್ದಾರೆ.

**ಶಾಸಕರ ಅಸಮಾಧಾನ, ಬೆಂಬಲಿಗರಿಂದ ಪ್ರತಿಭಟನೆ**

ಕಾಂಗ್ರೆಸ್ ತೊರೆದ ನಂತರ ಯಡಿಯೂರಪ್ಪ ಸಂಪುಟ ಸೇರಿದ್ದ ಶ್ರೀಮಂತ ಪಾಟೀಲ್ ಸಹ ಸಚಿವ ಸ್ಥಾನ ಪಡೆಯಲು ವಿಫಲರಾಗಿದ್ದು, ಅವರೂ ಶಂಕರ್ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಹಿರಿಯ ಶಾಸಕ ಎಸ್.ಎ ರಾಮದಾಸ್ ಅವರು ಮೈಸೂರು ಜಿಲ್ಲೆಗೆ ಪ್ರಾತಿನಿಧ್ಯ ಸಿಗಲಿದೆ ಎಂಬ ನಿರೀಕ್ಷೆ ವ್ಯಕ್ತಪಡಿಸಿದ್ದು, ನಿನ್ನೆಯಷ್ಟೇ ತಮಗೆ ಅಭಿನಂದನೆಯ ಸಂದೇಶ ಬಂದಿತ್ತು. ಕೊನೆ ಕ್ಷಣದಲ್ಲಿ ಏನು ಬದಲಾವಣೆಯಾಗಿದೆಯೋ ಗೊತ್ತಿಲ್ಲ. ಯಡಿಯೂರಪ್ಪ ಸಹ ತಮ್ಮ ಹೆಸರು ಸಚಿವರ ಪಟ್ಟಿಯಲ್ಲಿದೆ ಎಂದಿದ್ದರು ಎಂದು ತಿಳಿಸಿದ್ದಾರೆ.

ಹಾವೇರಿ ಶಾಸಕ ನೆಹರೂ ಓಲೇಕಾರ್ ಹೇಳಿಕೆ ನೀಡಿದ್ದು, ಸಂಘ ಪರಿವಾರದವರನ್ನು ಭೇಟಿ ಮಾಡಿ ದೂರು ನೀಡುವೆ ಎಂದಿದ್ದಾರೆ. ಓಲೇಕಾರ್ ಬೆಂಬಲಿಗರು ಸಚಿವ ಸ್ಥಾನ ಸಿಗದೇ ಇರುವುದಕ್ಕೆ ಬೀದಿಗಿಳಿದು ಪ್ರತಿಭಟಿಸಿದ್ದಾರೆ.

ದಾವಣಗೆರೆ ಜಿಲ್ಲೆಗೆ ಅನ್ಯಾಯವಾಗಿದೆ ಎಂದಿರುವ ಶಾಸಕ ಎಂ.ಪಿ. ರೇಣುಕಾಚಾರ್ಯ, ಜಿಲ್ಲೆಯಲ್ಲಿ ಯಾರಿಗಾದರೂ ಒಬ್ಬರಿಗೆ ಸಚಿವ ಸ್ಥಾನ ಕೊಡುವಂತೆ ಕೇಳಿದ್ದೆವು. ಆದರೆ, ಯಾರೊಬ್ಬರಿಗೂ ಸಚಿವ ಸ್ಥಾನ ಕೊಟ್ಟಿಲ್ಲ. ಇದನ್ನು ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಗಮನಕ್ಕೆ ತಂದಿದ್ದೇನೆ ಎಂದಿದ್ದಾರೆ.

ಕಲಬುರಗಿಯಲ್ಲಿ ಶಾಸಕ ದತ್ತಾತ್ರೇಯ ಚಂದ್ರಶೇಖರ ಪಾಟೀಲ್ ರೇವೂರ ಬೆಂಬಲಿಗರು ಪ್ರತಿಭಟನೆ ನಡೆಸಿದ್ದು, ಕಲ್ಯಾಣ ಕರ್ನಾಟಕಕ್ಕೆ ಸೂಕ್ತ ಪ್ರಾತಿನಿಧ್ಯ ದೊರೆತಿಲ್ಲ ಎಂದು ಆರೋಪಿಸಿದ್ದಾರೆ.

ಶೋರಾಪುರ ಶಾಸಕ ರಾಜುಗೌಡ ಬೆಂಬಲಿಗರು ಸಚಿವ ಸ್ಥಾನಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದಾರೆ.

ಮುಂದಿನ ಬದಲಾವಣೆ ವೇಳೆ ಸಚಿವ ಸ್ಥಾನ ನೀಡುವುದಾಗಿ ಬೊಮ್ಮಾಯಿ ನನಗೆ ಕರೆ ಮಾಡಿ ಹೇಳಿದ್ದಾರೆ. ಆದರೆ, 2023ರ ಚುನಾವಣೆ ನಂತರ ಪೂರ್ಣಾವಧಿಗೆ ಸಚಿವನಾಗುವೆ ಎಂದು ತಿಳಿಸಿದ್ದೇನೆ ಎಂದು ರಾಜು ಗೌಡ ಹೇಳಿದ್ದಾರೆ. ಆಳಂದ ಶಾಸಕ ಸುಭಾಷ್ ಗುತ್ತೇದಾರ್ ಹಾಗೂ ಹುಬ್ಬಳ್ಳಿ ಶಾಸಕ ಅರವಿಂದ ಬೆಲ್ಲದ್ ಅವರ ಬೆಂಬಲಿಗರೂ ಸಹ ಪ್ರತಿಭಟನೆ ನಡೆಸಿದ್ದಾರೆ.

ಹಿರಿಯೂರು ಶಾಸಕಿ ಪೂರ್ಣಿಮಾ ಶ್ರೀನಿವಾಸ್ ಹೇಳಿಕೆ ನೀಡಿದ್ದು, ನಾನು ಯಾವುದೇ ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ನನಗೆ ಯಾವುದೇ ಹಗರಣ ಸುತ್ತಿಕೊಂಡಿಲ್ಲ. ಹಗರಣದಲ್ಲಿ ಸಿಲುಕಿದವರಿಗೆ ಮತ್ತೆ ಸ್ಥಾನ ನೀಡಲಾಗಿದೆ. ಸ್ವಂತ ಬಲದಿಂದ ಗೆದ್ದಿರುವ ಶಾಸಕಿಗೆ ಅವಮಾನ ಮಾಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

# ನೂತನ ಸಂಪುಟದಲ್ಲಿ ಬಿಎಸ್‌ವೈ ಪರ-ವಿರೋಧಿಗಳಿಬ್ಬರಿಗೂ ಸ್ಥಾನವಿಲ್ಲ

ಬೆಂಗಳೂರು, ಆ. 4- ಮಾಜಿ ಮುಖ್ಯ ಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಬಹಿರಂಗ ಬಂಡಾಯ ಎದ್ದವರಿಗೆ ಹಾಗೂ ಅವರ ಪರ ನಿಂತವರನ್ನೂ ಬಿಜೆಪಿ ವರಿಷ್ಠರು ಸಿಎಂ ಬಸವರಾಜ ಬೊಮ್ಮಾಯಿ ಸಂಪುಟದಿಂದ ಹೊರಗಿಟ್ಟಿದ್ದಾರೆ.

ಅದರಲ್ಲೂ ಮುಖ್ಯಮಂತ್ರಿ ಅಭ್ಯರ್ಥಿ ಗಳೆಂದೇ ಬಿಂಬಿಸಲ್ಪಟ್ಟಿದ್ದ ಬಸನಗೌಡ ಪಾಟೀಲ್ ಯತ್ನಾಳ್ ಹಾಗೂ ಅರವಿಂದ ಬೆಲ್ಲದ್ ಅವರಿಗೆ ಮಂತ್ರಿ ಆಗುವ ಅವಕಾಶವೂ ದೊರೆಯಲಿಲ್ಲ.

ಇನ್ನು ಇಂಧನ ಖಾತೆಗೇ ಬೇಡಿಕೆ ಇಟ್ಟು ಉಪಮುಖ್ಯಮಂತ್ರಿ ಆಗುತ್ತೇನೆ ಎಂದು ಕನಸು ಕಂಡಿದ್ದ ಸಿ.ಪಿ. ಯೋಗೇಶ್ವರ್ ಹೊಸ ಮಂತ್ರಿ ಮಂಡಲದಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ವಿಫಲ ರಾದರು.

**ಯತ್ನಾಳ್, ಬೆಲ್ಲದ್, ಯೋಗೇಶ್ವರ್, ರೇಣುಕಾಚಾರ್ಯರಿಗೆ ಸಿಗದ ಸಚಿವ ಸ್ಥಾನ**

ಯಡಿಯೂರಪ್ಪ ಪರ ಸದಾ ನಿಂತಿದ್ದ ಅವರ ವಿರುದ್ಧ ಬಂಡಾಯ ಏಳುವವರಿಗೆ ಮಾರುತ್ತರ ನೀಡುತ್ತಿದ್ದ ಎಂ.ಪಿ. ರೇಣುಕಾಚಾರ್ಯ ಅವರಿಗೂ ಅವಕಾಶ ದೊರೆಯಲಿಲ್ಲ.

ಕರ್ನಾಟಕದಲ್ಲಿ ಯಾವುದೇ ಪಕ್ಷ ಅಧಿಕಾರಕ್ಕೆ ಬಂದರೂ ಮಂತ್ರಿಗಿರಿ ಪಡೆಯುತ್ತಿದ್ದ ಜಾರಕಿಹೊಳಿ ಕುಟುಂಬಕ್ಕೆ ಇದೇ ಮೊದಲ ಬಾರಿಗೆ ಅವಕಾಶ ಇಲ್ಲವಾಗಿದೆ.

ರಮೇಶ್ ಜಾರಕಿಹೊಳಿ ಬದಲು ಬಾಲಚಂದ್ರ ಜಾರಕಿಹೊಳಿ ಮಂತ್ರಿಯಾಗುತ್ತಾರೆ ಎಂಬುದು ಕೊನೆಗಳಿಗೆಯವರೆಗೂ ಕೇಳಿಬಂದಿತ್ತು, ಆದರೆ ಪಟ್ಟಿಯಲ್ಲಿ ಅವರಿಗೆ ನಿರಾಸೆ ಕಾದಿತ್ತು. ಕಳೆದ ಎರಡು ದಿನಗಳ ಹಿಂದಷ್ಟೇ ವಿಜಯಪುರ ಜಿಲ್ಲೆಗೆ ಪ್ರಾತಿನಿಧ್ಯ ನೀಡದಿದ್ದರೆ, ಮುಂದಿನ ದಿನಗಳಲ್ಲಿ ಬಣ್ಣ ಬಯಲು ಮಾಡುತ್ತೇನೆ ಎಂದು ಬಸನಗೌಡ ಪಾಟೀಲ್ ನೀಡಿದ್ದ ಎಚ್ಚರಿಕೆಗೂ ವರಿಷ್ಠರು ಕ್ಯಾರೆ ಎಂದಿಲ್ಲ.

ತಮ್ಮ ವಿರುದ್ಧ ಬಂಡಾಯ ಎದ್ದಿದ್ದವರಿಗೆ ಮಂತ್ರಿಮಂಡಲದಲ್ಲಿ ಅವಕಾಶ ನೀಡಬಾರದೆಂಬ ಯಡಿಯೂರಪ್ಪ ಪಟ್ಟು ವರಿಷ್ಠರನ್ನು ಮಣಿಸಿತು.

# ಅಡಿಕೆ ವರ್ತಕರಿಂದ ಭದ್ರೆಗೆ ಬಾಗಿನ



ದಾವಣಗೆರೆ, ಆ.4- ಜಿಲ್ಲೆಯ ರೈತರ ಜೀವನಾಡಿಯಾದ ಭದ್ರಾ ಜಲಾಶಯವು ತುಂಬುವ ಹಂತದಲ್ಲಿದ್ದು, ನಗರದ ಎಪಿಎಂಸಿ ಅಡಿಕೆ ವರ್ತಕರೂ, ಎಪಿಎಂಸಿ ಮಾಜಿ ಅಧ್ಯಕ್ಷರೂ, ನೀರು ಬಳಕೆದಾರರ ಸಹಕಾರ ಮಹಾಮಂಡಳದ ನಿರ್ದೇಶಕರೂ ಆದ ಮುದೇಗೌಡ್ರು ಗಿರೀಶ್ ಅವರ ನೇತೃತ್ವದಲ್ಲಿ ಭದ್ರಾ ಜಲಾಶಯಕ್ಕೆ ಇಂದು ಭೇಟಿ ನೀಡಿ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಅಡಿಕೆ ವರ್ತಕರಾದ ರಾಮಗೊಂಡನಹಳ್ಳಿ ಜಯಣ್ಣ, ಬನಶಂಕರಿಯ ಶಂಕ್ರಣ್ಣ, ರಾಮಗೊಂಡನಹಳ್ಳಿ ಬಸವರಾಜ, ಬಾಡದ ಸೋಮಶೇಖರ್, ದೊಗ್ಗಳ್ಳಿ ಶಿವಕುಮಾರ್, ಕಾಕನೂರು ಅಜ್ಜಣ್ಣ, ಎಸ್.ಎನ್.ಟಿ.ತಿಪ್ಪೇಸ್ವಾಮಿ, ಬೇತೂರಿನ ಎಂ.ಷಡಕ್ಷರಪ್ಪ, ಎಂ.ಸತೀಶ್, ವಿಠಲಾಪುರದ ಕಿರಣ, ಹೂವಿನಮಡು ನಾಗರಾಜ್ ಮತ್ತಿತರರಿದ್ದರು.

**ದ್ವಿತೀಯ ಪಿಯುಸಿ ಸಿಬಿಎಸ್‌ಇ ಪರೀಕ್ಷೆಯಲ್ಲಿ**

# ಅಶ್ವಿನಿ ಬಿಹಾರ್ ರಾಜ್ಯಕ್ಕೇ ಟಾಪರ್



ಹರಪನಹಳ್ಳಿ, ಆ.4- ಪಟ್ಟಣದ ವಾಲ್ಮೀಕಿ ನಗರದ ನಿವಾಸಿ ವೈ. ಅರುಣ ಕುಮಾರ್ ಅವರ ಪುತ್ರಿ ವೈ. ಅಶ್ವಿನಿ ದ್ವಿತೀಯ ಪಿಯುಸಿ ಸಿಬಿಎಸ್‌ಇ ಪರೀಕ್ಷೆಯಲ್ಲಿ 500ಕ್ಕೆ 495 ಅಂಕ ಪಡೆದು ಶೇ. 99 ರಷ್ಟು ಫಲಿತಾಂಶ ಪಡೆದು ಬಿಹಾರದ ಪಾಟ್ನಾ ವಿಭಾಗಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.

ಅಶ್ವಿನಿ ಪಾಟ್ನಾದ ಕೇಂದ್ರೀಯ ವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ತಂದೆ ವೈ. ಅರುಣ್ ಕುಮಾರ್ ಬಿಹಾರ ರಾಜ್ಯದಲ್ಲಿ ಐಎಎಸ್ ಅಧಿಕಾರಿಯಾಗಿದ್ದಾರೆ. ಅಶ್ವಿನಿ ಸಾಧನೆಗೆ ಇಂಜಿನಿಯರ್ ವೈ. ವಸಂತಕುಮಾರ್, ವಾಲ್ಮೀಕಿ ನಾಯಕ ಸಮಾಜದ ತಾಲ್ಲೂಕು ಅಧ್ಯಕ್ಷ ಕೆ. ಉಚ್ಚೆಂಗೆಪ್ಪ. ವಾಲ್ಮೀಕಿ ನಾಯಕ ಮಹಿಳಾ ಘಟಕದ ತಾಲ್ಲೂಕು ಅಧ್ಯಕ್ಷ ಕಂಚಿಕೇರಿ ಜಯಲಕ್ಷ್ಮಿ, ಏಕಲವ್ಯ ಸಂಘರ್ಷ ಸಮಿತಿ ತಾಲ್ಲೂಕು ಅಧ್ಯಕ್ಷ ಆರ್. ಪ್ರಕಾಶ್ ಇನ್ನಿತರರು ಅಭಿನಂದಿಸಿದ್ದಾರೆ.

# ದೇಶದಲ್ಲಿ 42,625 ಕೊರೊನಾ ಸೋಂಕು

ನವದೆಹಲಿ, ಆ. 4 - ದೇಶದಲ್ಲಿ ಮಂಗಳವಾರ 42,625 ಕೊರೊನಾ ಸೋಂಕಿತರು ಕಂಡು ಬಂದಿದ್ದು, 562 ಜನ ಸಾವನ್ನಪ್ಪಿದ್ದಾರೆ. ಸಕ್ರಿಯ ಸೋಂಕಿತರ ಸಂಖ್ಯೆ 4.10 ಲಕ್ಷಕ್ಕೆ ಏರಿಕೆಯಾಗಿದೆ.


ಸಕ್ರಿಯ ಸೋಂಕಿತರ ಸಂಖ್ಯೆ 24 ಗಂಟೆಗಳಲ್ಲಿ 5,395ರಷ್ಟು ಹೆಚ್ಚಾಗಿದೆ. ಕೊರೊನಾ ಪಾಸಿಟಿವ್ ದರ ಶೇ.2.31ರಷ್ಟಿದೆ.

# ಗ್ರಾಮೀಣದಲ್ಲಿ ಇಂದು ವಿದ್ಯುತ್ ಇಲ್ಲ

ಬೇತೂರು, ಕಾಡಜ್ಜಿ, ನಾಗರಕಟ್ಟೆ, ರಾಂಪುರ, ಬಸವನಾಳ್ ಮತ್ತು ಪುಟಗನಾಳ್ ಗ್ರಾಮಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


॥ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಚಿತ್ರದುರ್ಗ (ಜಿ॥) ಹೊಳಲ್ಕೆರೆ (ತಾ॥)
ತಾಳ್ಯ ಗ್ರಾಮ
ಉಪ್ಪರಿಗೆ ಶರಣೆ ಶೇಖರಮ್ಮ ಮತ್ತು ಮಕ್ಕಳು
ಇವರುಗಳು ಮಾಡುವ ವಿಜ್ಞಾಪನೆಗಳು.
ಶರಣ ಬಂಧುಗಳು/-ಮಿತ್ರರು
ದಿನಾಂಕ : 16.07.2021ರ ಶುಕ್ರವಾರ ಸಂಜೆ 4.45ರಲ್ಲಿ ನನ್ನ ಪೂಜ್ಯ ಪತಿಯವರಾದ
ಶರಣ ವಿ.ಆರ್. ಹನುಮಂತಪ್ಪನವರು
ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ತತ್ಸಂಬಂಧ
'ಕೈಲಾಸ ಶಿವಗಣಾರಾಧನೆ'ಯನ್ನು
ದಿನಾಂಕ : 06.08.2021ನೇ ಶುಕ್ರವಾರ ಬೆಳಿಗ್ಗೆ 10.30 ಗಂಟೆಗೆ ತಾಳ್ಯ ಗ್ರಾಮದ ಲಿಂಗೈಕ್ಯರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ : ಶರಣೆ ಶೇಖರಮ್ಮ
ಶ್ರೀಮತಿ ಅಕ್ಕಮಹಾದೇವಿ, ಶ್ರೀ ವಿ.ಹೆಚ್. ನಟರಾಜ್
ಆಂಜನೇಯ ಕಾಂಕ್ರೀಟ್ ಬ್ರಿಕ್ಸ್, ಶಿರಮಗೊಂಡನಹಳ್ಳಿ, ದಾವಣಗೆರೆ. ಫೋ. : 9980375906, ,
ಶ್ರೀ ವಿ.ಹೆಚ್. ಮಲ್ಲಿಕಾರ್ಜುನ್, ತಾಳ್ಯ., 8197569730
ಶ್ರೀಮತಿ ರೂಪ ಶ್ರೀ ವಿ.ಹೆಚ್. ಉಮೇಶ್ ತಾಳ್ಯ., 9902462828., ಶ್ರೀಮತಿ ಆಶಾ, ಶ್ರೀ ಷಡಾಕ್ಷರಮೂರ್ತಿ, USA. ಹಾಗೂ ಮೊಮ್ಮಕ್ಕಳು ಮತ್ತು ಉಪ್ಪರಿಗೆ ವಂಶಸ್ಥರು, ತಾಳ ಮತ್ತು ಬಂಧು-ಮಿತ್ರರು.
ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.



ಈಗ ದಾವಣಗೆರೆ ಸರಕಾರಿ ನೌಕರರ ಸಮುದಾಯ ಭವನದಲ್ಲಿ
ಐತಿಹಾಸಿಕ ಸೇಲ್ !!!
ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್, ಆಷಾಡ ಮಾಸದ ಭಾರಿ ರಿಯಾಯಿತಿ ಮಾರಾಟ

ನಮ್ಮ ದೇಶದ ಜನತೆಗೆ ಕರೋನಾ ವೈರಸ್ ಬೀತಿಯಿಂದ ತುಂಬಾ ತೊಂದರೆಯಾಗಿದೆ, ಹಲವು ಬ್ರಾಂಡೆಡ್ ಗಾರ್ಮೆಂಟ್ಸ್ ಕಾರ್ಖಾನೆಗಳು ತುಂಬಾ ಸಂಕಷ್ಟದಿಂದ ತೊಡಗಿದೆ. ಹೆಚ್ಚಿನ ಪ್ರಮಾಣದಲ್ಲಿ ನಷ್ಟ ಅನುಭವಿಸಿದೆ ಹಾಗೂ ಬಹಳಷ್ಟು ಪದಾರ್ಥಗಳು ಗೋಡನ್‌ನಲ್ಲಿ ಉಳಿದಿದೆ. ಇದರ ಕಾರಣದಿಂದ ಹಲವು ಕಾರ್ಖಾನೆಗಳು ಸ್ಟಾಕ್ ಕ್ಲಿಯರೆನ್ಸ್‌ಗಾಗಿ ದಾವಣಗೆರೆ ನಗರದ ಸರಕಾರಿ ನೌಕರರ ಸಮುದಾಯ ಭವನದಲ್ಲಿ ಮೆಘಾ ಆಫರ್‌ನೊಂದಿಗೆ ಹೆಚ್ಚು ಡಿಸ್ಕೌಂಟ್‌ಗಳನ್ನು ಕೊಡಲು ತೀರ್ಮಾನಿಸಿದೆ.

ಮಹಿಳೆಯರ, ಪುರುಷರ, ಮಕ್ಕಳ ಹಾಗೂ ಬೆಡ್‌ಶೀಟ್‌ಗಳ ಮೇಲೆ ಭಾರಿ ರಿಯಾಯಿತಿ.

Raymond | ARROW USA·1851 | IZOD | Pepe Jeans LONDON | Crocodile | PARK AVENUE | Lee | parx | Roots | ColorPlus

ರಾಜಸ್ಥಾನ ರಾಯಲ್ ಪ್ರಿಂಟ್ ಬೆಡ್‌ಶೀಟ್ ಮೇಳ
SYMBOL OF QUALITY
ಬೆಡ್ ಶೀಟ್ : ಕಥಾ ವರ್ಕ್ಸ್, ವರ್ಲಿ ಪ್ರಿಂಟ್, ಮಿಕ್ಕಿ ಮೌಸ್ ಪ್ರಿಂಟ್, ಕಾಟನ್ ಸರ್ಟಿನ್ ಬೆಡ್ ಶೀಟ್, ಕಲಂಕಾರಿ ಪ್ರಿಂಟ್, ಎಂಬ್ರಾಯಿಡ್ ವರ್ಕ್ಸ್, ಕಲಂಕಾರಿ ಗೋಲ್ಡ್ ಪ್ರಿಂಟ್, AC ಬ್ಲಾಂಕೆಟ್, ಪ್ಯಾಚ್ ವರ್ಕ್ಸ್ ಇತ್ಯಾದಿ
ಕುಷನ್ ಕವರ್ : ಸೋಫಾ ಶೀಟ್, ದಿವಾನ್ ಕಾಟ್ ಶೀಟ್ ಪಿಲ್ಲೋ ಕವರ್, ಮ್ಯಾಟ್, ಟೇಬಲ್ ಕ್ಲಾತ್, ವೆಜಿಟೇಬಲ್ ಪ್ರಿಂಟ್, ಸ್ಟೆಚ್ ಬೆಡ್ ಶೀಟ್ ಇತ್ಯಾದಿ

ರಿಲಿಯನ್ಸ್ ಮಿಕ್ಸ್ ವೈರೆಟಿ ಶರ್ಟ್ ಮತ್ತು ಟೀ-ಶರ್ಟ್
ಬಿಸ್‌ನೆಸ್ ಕ್ಲಾಸ್ ಶರ್ಟ್, ಆಫೀಸ್ ವೇರ್ ಶರ್ಟ್, ಪಾರ್ಟಿವೇರ್ ಶರ್ಟ್, ಕ್ಲಾಸ್ ವೇರ್ ಶರ್ಟ್, ಕ್ಯಾಶೂಯಲ್ ವೇರ್, ಫಾರ್ಮಲ್ ವೇರ್ ಇತ್ಯಾದಿ
ಕೇವಲ ರೂ. 350/- ರಿಂದ 400/- ರವರೆಗೆ

NEW STOCK EXPORTS SURPLUS ITEMS
50,000 ವಿವಿಧ ಪ್ರಕಾರದ ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಶರ್ಟ್, ಟೀ-ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಲೇಡಿಸ್ ಪೈಜಾಮ, ಕಿಡ್ಸ್ ಡ್ರೆಸ್, ಫ್ಯಾನ್ಸಿ ಸ್ಯಾರೀ, ಕುರ್ತೀಸ್, ನೈಟಿ ಹಾಗೂ ಇತರೆ
ಕೇವಲ ರೂ. 150/- ರಿಂದ 350/- ರವರೆಗೆ

ಸಿಲ್ಕ್ ಮತ್ತು ಪೂನಂ ಸ್ಯಾರಿ ಹಾಗೂ ಬ್ರಾಂಡೆಡ್ ಲೇಡಿಸ್ ಕುರ್ತೀಸ್ ಮೇಳಾ
ಸೀರೆಗಳು :- ಗ್ರೀನ್ ವಿಥ್ ಮರೂನ್ ವರ್ಕ್ಸ್ ಸ್ಯಾರೀಸ್, ವೈಯೋಲೆಟ್ ಸ್ಯಾಂಡಲ್ ಸ್ಯಾರೀಸ್, ಟ್ರಿಡಿಷನಲ್ ಬುಟ್ಟಿ ಸ್ಯಾರೀಸ್, ಸ್ವರ್ಣಲತಾ ಸಿಲ್ಕ್ ಸ್ಯಾರೀಸ್, ಚಾಂದೇರಿ ಸಿಲ್ಕ್ ಸ್ಯಾರೀಸ್, ಕಾಟನ್ ಸ್ಯಾರೀಸ್
ಲೇಡಿಸ್ ಕುರ್ತೀಸ್ : ಮಲ್ಟಿ ಗ್ರೀನ್ ಕಾಟನ್ ಕುರ್ತೀಸ್, ವಿವಿಧ ಬಣ್ಣಗಳ ಕುರ್ತೀಸ್, ಎಕ್ಸ್‌ಲೆಂಟ್ ಪಾರ್ಟಿವೇರ್, ಕುರ್ತೀಸ್, ಎಂಬ್ರಾಯ್‌ಡೆಡ್ ರಯಾನ ಕುರ್ತೀಸ್, ಪ್ರಿಂಟೆಡ್ ಕಾಟನ್ ಲಾಂಗ್ ಕುರ್ತೀಸ್ ಇತ್ಯಾದಿ.
ಕೇವಲ ರೂ. 150/- ರಿಂದ 500/- ಮಾತ್ರ

MRP Rs. 200/- to 300/-
ಬ್ರಾಂಡೆಡ್ ಬ್ರಾ ಮತ್ತು ಪ್ಯಾಂಟೀಸ್
• ಕಾಟನ್ ಚಿಕನ್ ಬ್ರಾ • ಸಿಲ್ಕ್ ಪ್ಯಾಂಟೀಸ್
• ಸ್ಟ್ರೇಬಲ್ ಬ್ರಾ • ಪ್ರಿಂಟೆಡ್ ಕಾಟನ್ ಪ್ಯಾಂಟೀಸ್
• ಅಲ್ಟ್ರಾ ಮಾಡರ್ನ್ ಬ್ರಾ • ಅಲ್ಟ್ರಾ ಮಾಡೆಲ್ ಪ್ಯಾಂಟೀಸ್
• ಸ್ಪೋರ್ಟ್ಸ್ ಬ್ರಾ
ಕೇವಲ ರೂ. 50/-

MRP ರೂ. 1499/- ರಿಂದ 4999/-
ಪುರುಷರ ಶರ್ಟ್ಸ್ & ಟೀ-ಶರ್ಟ್ಸ್, ಬ್ಯುಸಿನೆಸ್ ಕ್ಲಾಸ್, ಆಫೀಸ್‌ವೇರ್, ಪಾರ್ಟಿವೇರ್ ಇತ್ಯಾದಿ.
ಪುರುಷರ ಪ್ಯಾಂಟ್ಸ್: ಜೀನ್ಸ್, ಕಾಟನ್, ಚಿಕ್ಕ ಮಕ್ಕಳಿನ ಇತ್ಯಾದಿಗಳ ಮೇಲೆ
ಧಮಾಕಾ ಕೊಡುಗೆ
Rs. 599/- ರಿಂದ 999/-

ಸೇಲ್ 4 ದಿನಗಳ ಮಾತ್ರ 5, 6, 7 ಮತ್ತು 8 ಆಗಸ್ಟ್ 2021 ಸಮಯ : 10am to 9 pm NO LUNCH BREAK

ಸರಕಾರಿ ನೌಕರರ ಸಮುದಾಯ ಭವನ
ಎಸ್. ನಿಜಲಿಂಗಪ್ಪ ಲೇಔಟ್, ರಿಂಗ್ ರಸ್ತೆ ಸರ್ಕಲ್, ದಾವಣಗೆರೆ.
SARKARI NAUKARA SAMUDAYA BHAWAN S. Nijalingappa Layout, Ring Road Circle, Davanagere.
FREE ENTRANCE PARKING
All Major Debit / Credit Cards, Google Pay, PhonePe Accepted
As per Govt. Rules Please Wear Mask & Maintain Social Distance


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte